# ಕರ್ನಾಟಕ (ಸಂಡೂರು ಪ್ರದೇಶ) ಇನಾಮುಗಳ ರದ್ದಿಯಾತಿ ಅಧಿನಿಯಮ, 1976

**(ಕರ್ನಾಟಕ ರಾಜ್ಯಪತ್ರ, ಗುರುವಾರ, ಆಗಸ್ಟ್ 24, 2006, ಭಾಗ – IVಎ, 1479 ರಿಂದ 1496ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ)**

## ಅಧ್ಯಾಯ – I
### ಪ್ರಾರಂಭಿಕ


1. ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ
2. ವ್ಯಾಖ್ಯೆಗಳು


## ಅಧ್ಯಾಯ -II
### ರಾಜ್ಯದಲ್ಲಿನ ಇನಾಮುಗಳ ರದ್ದಿಯಾತಿ ಮತ್ತು ಅವುಗಳನ್ನು ನಿಹಿತಗೊಳಿಸುವುದು ಮತ್ತು ಅದರ ಪರಿಣಾಮಗಳು


3. ಇನಾಮುಗಳ ರದ್ದಿಯಾತಿ, ಅವುಗಳನ್ನು ನಿಹಿತಗೊಳಿಸುವುದು ಮತ್ತು ಅದರ ಪರಿಣಾಮಗಳು
4. ಅನುಭೋಗದಾರರಾಗಿ ನೋಂದಾಯಿತರಾಗುವ ಹಕ್ಕು
5. ಕೆಲವು ಭೂಮಿಗಳನ್ನು ನೋಂದಾಯಿಸತಕ್ಕದ್ದಲ್ಲ
6. ಕಟ್ಟಡಗಳನ್ನು ನಿಹಿತಗೊಳಿಸುವುದು
7. ಕೃಷಿಯೇತರ ಉದ್ದೇಶಗಳಿಗಾಗಿ ಉಪಯೋಗಿಸಲಾದ ಕೃಷಿ ಭೂಮಿಯ ಹಕ್ಕು
8. ರಾಜ್ಯ ಸರ್ಕಾರಕ್ಕೆ ಭೂ ಕಂದಾಯವನ್ನು ಸಂದಾಯ ಮಾಡುವ ಹೊಣೆಗಾರಿಕೆ
9. ಕೆಲವು ಪ್ರಕರಣಗಳಲ್ಲಿ ಹಕ್ಕನ್ನು ರಕ್ಷಿಸುವುದು


## ಅಧ್ಯಾಯ -III
### ಅನುಭೋಗದಾರನೆಂದು ನೋಂದಾಯಿಸುವುದು


10. ಅನುಭೋಗದಾರನೆಂದು ನೋಂದಾಯಿಸಿಕೊಳ್ಳುವ ಕಾರ್ಯವಿಧಾನ
11. ಕಂತು ಸಂದಾಯ ಇತ್ಯಾದಿ


## ಅಧ್ಯಾಯ IV
### ವೈಯಕ್ತಿಕ ಇನಾಮುಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಮೊತ್ತವನ್ನು ನಿರ್ಧರಿಸುವುದು


12. ಸಂದಾಯ ಮಾಡಬೇಕಾದ ಮೊತ್ತವನ್ನು ನಿರ್ಧರಿಸುವ ಬಗೆ
13. ಸಂದಾಯ ಮಾಡಬೇಕಾದ ಮೊತ್ತ
14. ಮೊಬಲಗಿನ ಸಂದಾಯ
15. ಮಧ್ಯಕಾಲೀನ ಸಂದಾಯ
16. ಸಂದಾಯವಾಗಬೇಕಾದ ಒಟ್ಟು ಮೊಬಲಗನ್ನು ಜಿಲ್ಲಾಧಿಕಾರಿಯು ನಿರ್ಧರಿಸುವುದು
17. ಮೊಬಲಗಿನಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ನೋಟೀಸ್ ನೀಡುವುದು
18. ಜಿಲ್ಲಾಧಿಕಾರಿಯಿಂದ ಮೊತ್ತದ ಹಂಚಿಕೆ
19. ಮೊಬಲಗಿನ ಹಂಚಿಕೆಯ ಕಾರ್ಯವಿಧಾನ
20. ಲೇಣಿದಾರರ ಹಕ್ಕುಸಾಧನೆಗಳು
21. ಮೊಬಲಗಿನಲ್ಲಿ ಹಿತಾಸಕ್ತಿಯ ಪ್ರಾಪ್ತಿ


## ಅಧ್ಯಾಯ –V
### ಧಾರ್ಮಿಕ ಅಥವಾ ಧರ್ಮಾರ್ಥ ಇನಾಮುಗಳ ಸಂಬಂಧದಲ್ಲಿ ಸಂದಾಯವಾಗಬೇಕಾದ ಮೊಬಲಗು


22. ಸಂದಾಯವಾಗಬೇಕಾದ ಮೊಬಲಗು
23. ಜಿಲ್ಲಾಧಿಕಾರಿಯು ಮೊಬಲಗನ್ನು ನಿರ್ಧರಿಸುವುದು


## ಅಧ್ಯಾಯ –VI
### ಸಂಕೀರ್ಣ


24. ವ್ಯಕ್ತಿಯು ಅನುಭೋಗದಾರನೆಂದು ನೋಂದಾಯಿಸಿಕೊಳ್ಳಬಹುದಾದ ಭೂಮಿಯ ವಿಸ್ತೀರ್ಣ
25. ರಾಜ್ಯ ಸರ್ಕಾರದಲ್ಲಿ ನಿಹಿತವಾಗುವ ಭೂಮಿಗಳ ವಿಲೇವಾರಿ
26. ವಿಭಾಗಾಧಿಕಾರಿಯಿಂದ ಪುನರೀಕ್ಷಣೆ
27. ವಿಭಾಗಾಧಿಕಾರಿಯಿಂದ ನಿಯಂತ್ರಣ
28. ರಾಜ್ಯ ಸರ್ಕಾರದಿಂದ ಪುನರೀಕ್ಷಣೆ
29. 8, 16 ಮತ್ತು 24ನೇ ಪ್ರಕರಣಗಳ ಅಡಿಯಲ್ಲಿನ ಆದೇಶದ ಮೇಲೆ ಮೇಲ್ಮನವಿ

30. ತಪ್ಪಾಗಿ ಅಥವಾ ಹೆಚ್ಚಾಗಿ ಮಾಡಿದ ಸಂದಾಯಗಳನ್ನು ಭೂ ಕಂದಾಯದ ಬಾಕಿ ಎಂಬಂತೆ ವಸೂಲಿ ಮಾಡುವುದು.
31. ಜಿಲ್ಲಾಧಿಕಾರಿಯಿಂದ ವಿಚಾರಣೆಗಳು.
32. ಈ ಅಧಿನಿಯಮದ ಅಡಿಯಲ್ಲಿ ಅರ್ಜಿಗಳು, ಮನವಿಗಳು, ಇತ್ಯಾದಿಗಳ ಮೇಲೆ ಸಂದಾಯ ಮಾಡಬೇಕಾದ ಶುಲ್ಕ.
33. ಕೆಲವು ಸಂದರ್ಭಗಳಲ್ಲಿ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.
34. ನಿಯಮ ರಚನಾಧಿಕಾರ.
35. ದಂಡನೆಗಳು.
36. ತೊಂದರೆಗಳನ್ನು ನಿವಾರಿಸುವ ಅಧಿಕಾರ.
37. ರಾಜ್ಯ ವಿಧಾನ ಮಂಡಲದ ಮುಂದೆ ನಿಯಮಗಳು ಮತ್ತು ಆದೇಶಗಳನ್ನು ಮಂಡಿಸುವುದು.
38. ನಿರಸನ.

ಅನುಸೂಚಿ–I

ಅನುಸೂಚಿ-II

## ಕರ್ನಾಟಕ (ಸಂಡೂರು ಪ್ರದೇಶ) ಇನಾಮುಗಳ ರದ್ದಿಯಾತಿ ಅಧಿನಿಯಮ, 1976

### ಉದ್ದೇಶ ಮತ್ತು ಕಾರಣಗಳ ಹೇಳಿಕೆಗಳು

**I**

**1976ರ ಅಧಿನಿಯಮ 54.–** ಸ್ವಾತಂತ್ರ್ಯ ಬಂದಾಗಿನಿಂದಲೂ ಜಹಗೀರುದಾರರ, ಇನಾಮುದಾರರ, ಜಮೀನ್ದಾರರೇ ಮುಂತಾದವರ ಭೂಮಿಯ ಮೇಲಿನ ಎಲ್ಲ ವಿಶೇಷ ಹಿಡುವಳಿ ಹಕ್ಕನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಸಂಬಂಧದಲ್ಲಿನ ಶಾಸನಾತ್ಮಕ ಕ್ರಮವನ್ನು ಹಿಂದಿನ ಮೈಸೂರು ರಾಜ್ಯದಲ್ಲಿ ಪೂರ್ಣಗೊಳಿಸಲಾಗಿದ್ದು, ವೈಯಕ್ತಿಕ ಇನಾಮುಗಳನ್ನು ಹೈದರಾಬಾದ್ ಮತ್ತು ಮುಂಬಯಿ ಪ್ರದೇಶಗಳಲ್ಲಿ ಸಹ ರದ್ದುಗೊಳಿಸಲಾಗಿದೆ. ಮುಂಬಯಿ ಮತ್ತು ಹೈದರಾಬಾದ್ ಪ್ರದೇಶಗಳಲ್ಲಿ ಧಾರ್ಮಿಕ ಹಾಗೂ ಧರ್ಮಾರ್ಥ ಇನಾಮುಗಳನ್ನು ರದ್ದುಗೊಳಿಸುವುದಕ್ಕಾಗಿ, ರಾಜ್ಯ ವಿಧಾನ ಮಂಡಲವು ಇತ್ತೀಚೆಗೆ ವಿಧೇಯಕವೊಂದನ್ನು ಅಂಗೀಕರಿಸಿದೆ. ಪ್ರಸ್ತುತ ವಿಧೇಯಕವು ಹಿಂದಿನ ಸಂಡೂರು ಪ್ರದೇಶದಲ್ಲಿನ ವೈಯಕ್ತಿಕ ಮತ್ತು ಧಾರ್ಮಿಕ ಹಾಗೂ ಧರ್ಮಾರ್ಥ ಇನಾಮುಗಳೆರಡರ ರದ್ದತಿಯನ್ನು ನಿಶ್ಚಿತಪಡಿಸಲು ಉದ್ದೇಶಿಸಲಾಗಿದೆ. ಈ ಎಲ್ಲ ಇನಾಮುಗಳು ಅಧಿನಿಯಮದ ಅಡಿಯಲ್ಲಿ ಅಧಿಸೂಚಿತವಾಗುವ ದಿನಾಂಕದಿಂದ ಸರ್ಕಾರದಲ್ಲಿ ನಿಹಿತವಾಗುತ್ತವೆ. ವೈಯಕ್ತಿಕ ಮತ್ತು ಧರ್ಮಾರ್ಥ ಹಾಗೂ ಧಾರ್ಮಿಕ ಇನಾಮುದಾರರ ಅಧೀನದಲ್ಲಿರುವ ಭೂಮಿಗಳನ್ನು ಹೊಂದಿರುವ ಗೇಣಿದಾರರು, ಗೇಣಿದಾರಿಕೆಯ ನಿಬಂಧನೆಗಳನ್ನು ಆಧರಿಸಿ ಭೂ ಕಂದಾಯದ ಕೆಲವೊಂದು ಗುಣಕ ಮೊತ್ತವನ್ನು ಸಂದಾಯ ಮಾಡಿದ ಮೇಲೆ ಅನುಭೋಗದ ಹಕ್ಕುಗಳನ್ನು ಪಡೆಯುತ್ತಾರೆ. ಗೇಣಿದಾರರು ಅನುಭೋಗದ ಹಕ್ಕುಗಳನ್ನು ಪಡೆಯಲು ಇನಾಮಿನಲ್ಲಿ ಒಳಗೊಂಡಿರುವ ಭೂಮಿಗೆ ಸಂದಾಯ ಮಾಡಬೇಕಾಗಿರುವ ಕಂತಿನ ಮೊತ್ತದಷ್ಟು ಹಣವನ್ನು ವೈಯಕ್ತಿಕ ಇನಾಮುಗಳನ್ನು ಹೊಂದಿರುವವರಿಗೆ ಕೊಡಲಾಗುತ್ತದೆ. ಧಾರ್ಮಿಕ ಹಾಗೂ ಧರ್ಮಾರ್ಥ ಇನಾಮುಗಳನ್ನು ಹೊಂದಿರುವ ಸಂಸ್ಥೆಗಳು, ಅವು ಹೊಂದಿರುವ ಇನಾಮುಗಳಲ್ಲಿ ಒಳಗೊಂಡಿರುವ ಭೂಮಿಗಳ ಮೇಲೆ ಸಂದಾಯ ಮಾಡಬೇಕಾದ ಭೂಕಂದಾಯದ 10 ರಷ್ಟಕ್ಕೆ ಸಮನಾದ ಒಂದು ವಾರ್ಷಿಕ ಉಂಬಳಿ ಅನುದಾನವನ್ನು ಪಡೆಯುತ್ತವೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ) ಭಾಗ IV– 2ಎ, ದಿನಾಂಕ 11.9.1973ರಲ್ಲಿ ಸಂಖ್ಯೆ 728 ಎಂದು ಪ್ರಕಟವಾಗಿದೆ).

**II**

**1979ರ ತಿದ್ದುಪಡಿ ಮಾಡುವ ಅಧಿನಿಯಮ 32.–** ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977ರ (1978ರ ಕರ್ನಾಟಕ ಅಧಿನಿಯಮ 10) 11ನೇ ಪ್ರಕರಣದ ಅಡಿಯಲ್ಲಿ, ಅಧಿನಿಯಮವನ್ನು ಜಾರಿಗೊಳಿಸಿದ ದಿನಾಂಕದಿಂದ ಆರು ತಿಂಗಳೊಳಗೆ ಅಧಿಭೋಗದಾರನಾಗಿ ನೋಂದಾಯಿಸಿಕೊಳ್ಳಲು ಅರ್ಜಿ ಸಲ್ಲಿಸುವಂತೆ ಅಗತ್ಯಪಡಿಸಲಾಗಿದೆ. ಈ ಅಧಿನಿಯಮವನ್ನು 1978ರ ಜೂನ್ 15ನೇ ದಿನಾಂಕದಂದು ಜಾರಿಗೊಳಿಸಲಾಗಿದೆ. 1976ರ ಕರ್ನಾಟಕ ಅಧಿನಿಯಮ 54ರ 10ನೇ ಪ್ರಕರಣದ ಅಡಿಯಲ್ಲಿ, ಈ ಅಧಿನಿಯಮವನ್ನು ಜಾರಿಗೊಳಿಸಿದ ದಿನಾಂಕದಿಂದ ಆರು ತಿಂಗಳೊಳಗೆ ಅಧಿಭೋಗದಾರನಾಗಿ ನೋಂದಾಯಿಸಿಕೊಳ್ಳಲು ಅರ್ಜಿ ಸಲ್ಲಿಸುವಂತೆ ಅಗತ್ಯಪಡಿಸಲಾಗಿದೆ. ಈ ಅಧಿನಿಯಮವನ್ನು 1976ರ ನವೆಂಬರ್ 8ನೇ ದಿನಾಂಕದಂದು ಜಾರಿಗೊಳಿಸಲಾಗಿದೆ.

ಈ ಎರಡು ಅಧಿನಿಯಮಗಳ ಅಡಿಯಲ್ಲಿ ಅಧಿಭೋಗದಾರರಾಗಿ ನೋಂದಾಯಿಸಿಕೊಳ್ಳಲು ಅರ್ಜಿಗಳನ್ನು ಸ್ವೀಕರಿಸುವುದಕ್ಕೆ ಇದ್ದ ಕೊನೆಯ ದಿನಾಂಕವು, ಸದರಿ ಅಧಿನಿಯಮಗಳ ಅಡಿಯಲ್ಲಿ ನಿಯಮಗಳನ್ನು ಆಖೈರುಗೊಳಿಸುವುದಕ್ಕೆ ಮುಂಚೆಯೇ ಆಗಿಹೋದುದರಿಂದ, ಆ ಮೂಲಕ ಅರ್ಜಿದಾರರಿಗೆ ಉಂಟಾದ ತೊಂದರೆಯನ್ನು, ಅರ್ಜಿಗಳನ್ನು ಸ್ವೀಕರಿಸುವುದಕ್ಕೆ ಇದ್ದ ಕೊನೆಯ ದಿನಾಂಕವನ್ನು 1980ರ ಮಾರ್ಚ್ 31ರ (ಸೇರಿದಂತೆ)ವರೆಗೆ ವಿಸ್ತರಿಸುವ ಮೂಲಕ ನಿವಾರಿಸಲು

ಉದ್ದೇಶಿಸಲಾಗಿದೆ. ಕರ್ನಾಟಕ (ಸಂಡೂರು ಪ್ರದೇಶ) ಇನಾಮುಗಳ ರದ್ದಿಯಾತಿ ಅಧಿನಿಯಮ, 1976ರ 1ನೇ ಪ್ರಕರಣದ (4)ನೇ ಉಪಪ್ರಕರಣಕ್ಕೆ ಔಪಚಾರಿಕ ತಿದ್ದುಪಡಿಯೊಂದನ್ನು ಸೇರಿಸುವ ಅವಕಾಶವನ್ನೂ ಬಳಸಿಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.

(1979ರ ವಿ.ಸ.ವಿ ಸಂಖ್ಯೆ 4106 ರಿಂದ ಪಡೆಯಲಾಗಿದೆ).

**III**

**1981ರ ತಿದ್ದುಪಡಿ ಅಧಿನಿಯಮ 23.–** ಮೈಸೂರು (ಧಾರ್ಮಿಕ ಹಾಗೂ ಧರ್ಮಾರ್ಥ) ಇನಾಮುಗಳ ರದ್ದಿಯಾತಿ ಅಧಿನಿಯಮ, 1955, ಇನಾಮುಗಳ ರದ್ದಿಯಾತಿ (ಸಂಡೂರು ಪ್ರದೇಶ) ಅಧಿನಿಯಮ, 1976 ಮತ್ತು ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977ರ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತವಾಗಿರುವ ಭೂಮಿಗಳ ಅಧಿಭೋಗದಾರರಾಗಿ ನೋಂದಾಯಿಸಿಕೊಳ್ಳುವುದಕ್ಕಾಗಿ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕವು ಮುಕ್ತಾಯವಾಗಿದೆ. ಅನೇಕ ಪ್ರಾಮಾಣಿಕ ಅಧಿಭೋಗದಾರರು ತಮ್ಮ ಅರ್ಜಿಗಳನ್ನು ಸಲ್ಲಿಸಲು ಸಾಧ್ಯವಾಗದೆ ಇದ್ದುದರಿಂದ ಸಮಯವನ್ನು ವಿಸ್ತರಿಸುವಂತೆ ಕೋರಿರುವ ಮನವಿಗಳನ್ನು ಸ್ವೀಕರಿಸಲಾಗಿದೆ. 1981ರ ಜೂನ್ 30ನೇ ದಿನಾಂಕದವರೆಗೆ ಈ ಸಮಯವನ್ನು ವಿಸ್ತರಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ) ಭಾಗ IV– 2ಎ, ದಿನಾಂಕ 3.2.1981ರ ಪುಟ 4ರಲ್ಲಿ ಸಂಖ್ಯೆ 91 ಎಂದು ಪ್ರಕಟವಾಗಿದೆ).

**IV**

**1984ರ ತಿದ್ದುಪಡಿ ಮಾಡುವ ಅಧಿನಿಯಮ 24.–** ಮೈಸೂರು (ಧಾರ್ಮಿಕ ಹಾಗೂ ಧರ್ಮಾರ್ಥ) ಇನಾಮುಗಳ ರದ್ದಿಯಾತಿ ಅಧಿನಿಯಮ, 1955, ಕರ್ನಾಟಕ (ಸಂಡೂರು ಪ್ರದೇಶ) ಇನಾಮು ರದ್ದಿಯಾತಿ ಅಧಿನಿಯಮ, 1976 ಮತ್ತು ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977ರ ಅಡಿಯಲ್ಲಿ ಅಧಿಭೋಗದಾರರೆಂದು ನೊಂದಾಯಿಸಿಕೊಳ್ಳಲು ಅರ್ಹರಾದ ಕೃಷಿ ಭೂಮಿಗಳ ಅಧಿಭೋಗದಾರರು ನಿರ್ದಿಷ್ಟಪಡಿಸಿದ ಕಾಲದೊಳಗೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಮೇಲ್ಕಂಡ ಅಧಿನಿಯಮಗಳನ್ನು, 1981ರ ಕರ್ನಾಟಕ ಅಧಿನಿಯಮ 23ರ ಮೂಲಕ ತಿದ್ದುಪಡಿ ಮಾಡಲಾಗಿದೆ ಮತ್ತು ಈ ಅವಧಿಯನ್ನು 1981ರ ಜೂನ್ 30ರ ವರೆಗೆ ವಿಸ್ತರಿಸಲಾಗಿದೆ.

ಇನಾಮು ಭೂಮಿಗಳ ಹೆಚ್ಚಿನ ಸಣ್ಣಪುಟ್ಟ ಹಿಡುವಳಿದಾರರಿಗೆ ಅರ್ಜಿಗಳನ್ನು ಸಲ್ಲಿಸಬೇಕೆಂಬ ಸಂಗತಿ ಗೊತ್ತಿಲ್ಲದೆ ಇದ್ದುದರಿಂದ, ಅರ್ಜಿಗಳನ್ನು ಸಲ್ಲಿಸಲು ಸಮಯವನ್ನು ಮತ್ತಷ್ಟು ವಿಸ್ತರಿಸುವಂತೆ ಕೋರಿರುವ ಹಲವಾರು ಮನವಿಗಳನ್ನು ಸ್ವೀಕರಿಸಲಾಗಿದೆ.

ಇನಾಮು ಭೂಮಿಗಳ ಅಂಥ ಹಿಡುವಳಿದಾರರಿಗೆ ನೆರವಾಗುವ ದೃಷ್ಟಿಯಿಂದ 1984ರ ಮಾರ್ಚ್ 31ರವರೆಗೆ ಅವಧಿಯನ್ನು ವಿಸ್ತರಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ. ಈ ತೀರ್ಮಾನವನ್ನು ಜಾರಿಗೊಳಿಸಲು ಅಧ್ಯಾದೇಶ ಹೊರಡಿಸಲಾಗಿದೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶಕ್ಕೆ ಬದಲಾಗಿ ಮಂಡಿಸಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ) ಭಾಗ IV– 2ಎ, ದಿನಾಂಕ 23.1.1984ರ ಪುಟ 4 ರಲ್ಲಿ ಸಂಖ್ಯೆ 66 ಎಂದು ಪ್ರಕಟವಾಗಿದೆ).

**V**

**1986ರ ತಿದ್ದುಪಡಿ ಮಾಡುವ ಅಧಿನಿಯಮ 19.–** 1961ರ ಕರ್ನಾಟಕ ಭೂ ಸುಧಾರಣಾ ಅಧಿನಿಯಮದಲ್ಲಿ, ಭೂಸುಧಾರಣಾ ನ್ಯಾಯಾಧಿಕರಣವು ಹೊರಡಿಸಿದ ಆದೇಶಕ್ಕೆ ವಿರುದ್ಧವಾಗಿ ಮೇಲ್ಮನವಿಯನ್ನು ಸಲ್ಲಿಸಲು ಯಾವುದೇ ಉಪಬಂಧವಿರುವುದಿಲ್ಲ.

ನ್ಯಾಯಾಧಿಕರಣವು ಪ್ರಕರಣಗಳ ವಿಲೆಯನ್ನು ತೃಪ್ತಿಕರವಾಗಿ ಮಾಡಿಲ್ಲದಿರುವುದನ್ನು ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ. 2944/ 1981 ರಲ್ಲಿ ಗಮನಿಸಿದ್ದು ವಿವಾದಗಳ ಯುಕ್ತ ನ್ಯಾಯ ನಿರ್ಣಯಕ್ಕೆ ಅನುಕೂಲ ಕಲ್ಪಿಸುವ ಸಲುವಾಗಿ ಮೇಲ್ಮನವಿಯನ್ನು ಸಲ್ಲಿಸಲು ಅಧಿನಿಯಮದಲ್ಲಿ ಉಪಬಂಧವೊಂದನ್ನು ಕಲ್ಪಿಸುವುದು ಅಪೇಕ್ಷಣೀಯವಾಗಿದೆ.

ಆದುದರಿಂದ, ಮೇಲ್ಮನವಿ ಪ್ರಾಧಿಕಾರವೊಂದನ್ನು ರಚಿಸುವ ಮೂಲಕ, ಭೂಸುಧಾರಣೆ ನ್ಯಾಯಾಧಿಕರಣದ ನಿರ್ಣಯಕ್ಕೆ ವಿರುದ್ಧವಾಗಿ ಮೇಲ್ಮನವಿ ಸಲ್ಲಿಸಲು ಉಪಬಂಧ ಕಲ್ಪಿಸಲು ಉದ್ದೇಶಿಸಲಾಗಿದೆ.

10 ಎಕರೆ ಡಿ ವರ್ಗದ ಭೂಮಿಗೆ ಸಮನಾದ ಅಥವಾ ಅದಕ್ಕೂ ಕಡಿಮೆ ಭೂಮಿಯ ಅಧಿಭೋಗದಾರನಂತೆ ನೋಂದಾಯಿಸಿಕೊಂಡಿರುವ ವ್ಯಕ್ತಿಯು, 1984ರ ಅಕ್ಟೋಬರ್ 17ನೇ ದಿನಾಂಕದಂದು ಅಥವಾ ಆ ತರುವಾಯ ಸಂದಾಯ ಮಾಡಬೇಕಾದ ಕಂತನ್ನು ಸಹ ಮನ್ನಾ ಮಾಡಲು ಉದ್ದೇಶಿಸಲಾಗಿದೆ.

ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ಅಧ್ಯಾದೇಶ, 1985 (1985ರ ಕರ್ನಾಟಕ ಅಧ್ಯಾದೇಶ 18)ನ್ನು ಸದರಿ ಉದ್ದೇಶಕ್ಕಾಗಿ ಹೊರಡಿಸಲಾಗಿದೆ.

ಈ ವಿಧೇಯಕವನ್ನು ಸದರಿ ಅಧ್ಯಾದೇಶಕ್ಕೆ ಬದಲಾಗಿ ಮಂಡಿಸಲಾಗಿದೆ.

ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ ಅಧಿನಿಯಮ, 1954, ಮೈಸೂರು (ಧಾರ್ಮಿಕ ಹಾಗೂ ಧರ್ಮಾರ್ಥ) ಇನಾಮುಗಳ ರದ್ದಿಯಾತಿ ಅಧಿನಿಯಮ, 1955, ಕರ್ನಾಟಕ (ಸಂಡೂರು ಪ್ರದೇಶ) ಇನಾಮುಗಳ ರದ್ದಿಯಾತಿ ಅಧಿನಿಯಮ, 1976 ಮತ್ತು ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977ರ ಅಡಿಯಲ್ಲಿನ ಪ್ರಕರಣಗಳಿಗೆ ಮೇಲ್ಮನವಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸುವ ಅವಕಾಶವನ್ನು ಕಲ್ಪಿಸಲು ಸಹ ಭೂ ಸುಧಾರಣಾ ನ್ಯಾಯಾಧಿಕರಣವು ತೀರ್ಮಾನಿಸಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ) ಭಾಗ IV– 2ಎ, ದಿನಾಂಕ 21.2.1986ರ ಪುಟ 11ರಲ್ಲಿ ಸಂಖ್ಯೆ 135 ಎಂದು ಪ್ರಕಟವಾಗಿದೆ).

## VI

**1987ರ ತಿದ್ದುಪಡಿ ಮಾಡುವ ಅಧಿನಿಯಮ 4.–** ಸ್ವತಂತ್ರ ಇನಾಮುಗಳ ಸಂಬಂಧದಲ್ಲಿ, ಮೈಸೂರು ಧಾರ್ಮಿಕ ಹಾಗೂ ಧರ್ಮಾರ್ಥ ಇನಾಮುಗಳ ರದ್ದಿಯಾತಿ ಅಧಿನಿಯಮ, 1955, ಕರ್ನಾಟಕ (ಸಂಡೂರು ಪ್ರದೇಶ) ಇನಾಮುಗಳ ರದ್ದಿಯಾತಿ ಅಧಿನಿಯಮ, 1976 ಮತ್ತು ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977ರ ಅಡಿಯಲ್ಲಿ, ಸರ್ಕಾರದಲ್ಲಿ ನಿಹಿತವಾಗಿರುವ ಭೂಮಿಯ ಅಧಿಭೋಗದಾರನೆಂದು ನೋಂದಾಯಿಸಿಕೊಳ್ಳಲು ಭೂ ನ್ಯಾಯಾಧಿಕರಣಗಳ ಮುಂದೆ ಅರ್ಜಿಗಳನ್ನು ಸಲ್ಲಿಸುವುದಕ್ಕಾಗಿ ಕೊನೆಯ ದಿನಾಂಕವು 1984ರ ಮಾರ್ಚ್ 31 ಮತ್ತು 1984ರ ಡಿಸೆಂಬರ್ 31 ಆಗಿತ್ತು.

ಅವಧಿಯನ್ನು ಇನ್ನಷ್ಟು ವಿಸ್ತರಿಸುವಂತೆ ಮನವಿಗಳನ್ನು ಸ್ವೀಕರಿಸಿದ್ದರಿಂದ, 1986ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 16ನ್ನು, 1986ರ ನವೆಂಬರ್ ಇಪ್ಪತ್ತೇಳನೇ ದಿವಸದಂದು ಹೊರಡಿಸಲಾಯಿತು. ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕವನ್ನು ಮಂಡಿಸಲು ಉದ್ದೇಶಿಸಲಾಗಿದೆ. ಸ್ವತಂತ್ರಗೊಳಿಸಿದ ಇನಾಮುಗಳ ಸಂಬಂಧದಲ್ಲಿ ಸಹ ಅವಧಿಯನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ) ಭಾಗ IV– 2ಎ, ದಿನಾಂಕ 23.1.1987ರ ಪುಟ 4ರಲ್ಲಿ ಸಂಖ್ಯೆ 78 ಎಂದು ಪ್ರಕಟವಾಗಿದೆ).

## VII

**1990ರ ತಿದ್ದುಪಡಿ ಮಾಡುವ ಅಧಿನಿಯಮ 18.– ಟಿಪ್ಪಣಿ.–** ಈ ಅಧಿನಿಯಮದ ಮೂಲಕ ಭೂ ಸುಧಾರಣೆಗಳ ಅಧಿನಿಯಮ, 1961ಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ ಮತ್ತು ಈ ಅಧಿನಿಯಮಕ್ಕೆ ಕೆಲವು ಆನುಷಂಗಿಕ ತಿದ್ದುಪಡಿಗಳನ್ನೂ ಮಾಡಲಾಗಿದೆ.

(ಕರ್ನಾಟಕ ರಾಜ್ಯಪತ್ರ (ವಿಶೇಷ) ಭಾಗ IV– 2ಎ, ದಿನಾಂಕ 28.6.1990ರ ಪುಟ 7 ರಲ್ಲಿ ಸಂಖ್ಯೆ 420 ಎಂದು ಪ್ರಕಟವಾಗಿದೆ).

## VIII

**1991ರ ತಿದ್ದುಪಡಿ ಮಾಡುವ ಅಧಿನಿಯಮ 3.–** ಸ್ವತಂತ್ರಗೊಳಿಸಿದ ಇನಾಮುಗಳೂ ಸೇರಿದಂತೆ, ಕರ್ನಾಟಕ (ಸಂಡೂರು ಪ್ರದೇಶ) ಇನಾಮುಗಳ ರದ್ದಿಯಾತಿ ಅಧಿನಿಯಮ, 1976 ಮತ್ತು ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977ರ ಅಡಿಯಲ್ಲಿ ಸರ್ಕಾರದಲ್ಲಿ ನಿಹಿತವಾಗಿರುವ ಭೂಮಿಗಳ ಅಧಿಭೋಗದಾರರಾಗಿ ನೋಂದಾಯಿಸಿಕೊಳ್ಳಲು ಭೂ ನ್ಯಾಯಾಧಿಕರಣಗಳ ಮುಂದೆ ಅರ್ಜಿಗಳನ್ನು ಸಲ್ಲಿಸುವುದಕ್ಕಾಗಿ 1987ರ ಜೂನ್ 30 ಕೊನೆಯ ದಿನಾಂಕವಾಗಿದೆ.

ಅವಧಿಯನ್ನು ವಿಸ್ತರಿಸುವಂತೆ ಮನವಿಗಳನ್ನು ಸ್ವೀಕರಿಸಲಾಗಿದ್ದು, 1991ರ ಮಾರ್ಚ್ 31ನೇ ದಿನಾಂಕದವರೆಗೆ ಅವಧಿಯನ್ನು ವಿಸ್ತರಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ) ಭಾಗ IV– 2ಎ, ದಿನಾಂಕ 28.12.1990ರ ಪುಟ 3ರಲ್ಲಿ ಸಂಖ್ಯೆ 672 ಎಂದು ಪ್ರಕಟವಾಗಿದೆ).

## IX

**2000ದ ತಿದ್ದುಪಡಿ ಮಾಡುವ ಅಧಿನಿಯಮ 22.– ಟಿಪ್ಪಣಿ:–** ಈ ಅಧಿನಿಯಮದ ಮೂಲಕ ಬಳಕೆಯಲ್ಲಿಲ್ಲದ ಕೆಲವು ಕಾನೂನುಗಳನ್ನು ನಿರಸನಗೊಳಿಸಲಾಗಿದೆ ಮತ್ತು 1976ರ ಅಧಿನಿಯಮ 54 ಸೇರಿದಂತೆ ಕೆಲವು ಅಧಿನಿಯಮಗಳಿಗೆ ಕೆಲವು ಆನುಷಂಗಿಕ ಅಥವಾ ಸಣ್ಣಪುಟ್ಟ ತಿದ್ದುಪಡಿಗಳನ್ನು ಮಾಡಲಾಗಿದೆ.

# 1976ರ ಕರ್ನಾಟಕ ಅಧಿನಿಯಮ ಸಂಖ್ಯೆ 54

(1976ರ ಸೆಪ್ಟೆಂಬರ್ ಏಳನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ).

# ಕರ್ನಾಟಕ (ಸಂಡೂರು ಪ್ರದೇಶ) ಇನಾಮುಗಳ ರದ್ದಿಯಾತಿ ಅಧಿನಿಯಮ, 1976

(1976ರ ಸೆಪ್ಟೆಂಬರ್ ಹದಿಮೂರನೇ ದಿನಾಂಕದಂದು ರಾಷ್ಟ್ರಪತಿಗಳ ಸಮ್ಮತಿ ಪಡೆದಿದೆ)

(1979ರ 32, 1981 ರ 23, 1984ರ 24, 1986ರ 19, 1987ರ 4, 1990ರ 18, 1991ರ 3 ಮತ್ತು 2000ದ 22– ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ.)

**ಇದು ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಸಂಡೂರು ಪ್ರದೇಶದಲ್ಲಿನ ಇನಾಮುಗಳ ಮತ್ತು ಸಣ್ಣ ಇನಾಮುಗಳ ರದ್ದಿಯಾತಿಗಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.**

ಸಾರ್ವಜನಿಕ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಸಂಡೂರು ಪ್ರದೇಶದಲ್ಲಿನ ಎಲ್ಲ ಇನಾಮುಗಳು ಮತ್ತು ಸಣ್ಣ ಇನಾಮುಗಳ ರದ್ದಿಯಾತಿಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

## ಅಧ್ಯಾಯ – I
## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ (ಸಂಡೂರು ಪ್ರದೇಶ) ಇನಾಮುಗಳ ರದ್ದಿಯಾತಿ ಅಧಿನಿಯಮ, 1976 ಎಂದು ಕರೆಯತಕ್ಕದ್ದು.

(2) ಇದು, ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಸಂಡೂರು ಪ್ರದೇಶಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಸಂಡೂರು ಪ್ರದೇಶದಲ್ಲಿನ ಎಲ್ಲ ಇನಾಮು ಗ್ರಾಮಗಳಿಗೆ ಮತ್ತು ಎಲ್ಲ ಸಣ್ಣ ಇನಾಮುಗಳಿಗೂ ಸಹ ಅನ್ವಯವಾಗುತ್ತದೆ.

[1][(4) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [2][ದಿನಾಂಕ][2] ದಂದು ಇದು ಜಾರಿಗೆ ಬರತಕ್ಕದ್ದು. ][1]

1. 1979ರ ಅಧಿನಿಯಮ 32ರ ಮೂಲಕ 08.11.1976ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. ಅಧಿನಿಯಮವು, ಅಧಿಸೂಚನೆ ಸಂಖ್ಯೆ ಆರ್‌ಡಿ 84 ಎಎಂಎ 76, ದಿನಾಂಕ 8.11.1976ರ ಮೂಲಕ 8.11.1976ರಿಂದ ಜಾರಿಗೆ ಬಂದಿದೆ. ಈ ಅಧಿಸೂಚನೆಯ ಪತ್ರವು ಕೊನೆಯ ಪುಟದಲ್ಲಿದೆ.

**2. ವ್ಯಾಖ್ಯೆಗಳು.–** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಅಧಿನಿಯಮ" ಎಂದರೆ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12);

[1][(ಎಎXXX][1]

1. 1986ರ ಅಧಿನಿಯಮ ಸಂ. 19 ರ ಮೂಲಕ 6.12.1985ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಮತ್ತು 1990ರ ಅಧಿನಿಯಮ 18ರ ಮೂಲಕ 8.10.1990ರಿಂದ ಜಾರಿಗೆ ಬರುವಂತೆ ಕೈಬಿಡಲಾಗಿದೆ.

(ಬಿ) "ಗೊತ್ತುಪಡಿಸಲಾದ ದಿನಾಂಕ" ಎಂದರೆ, 1ನೇ ಪ್ರಕರಣದ (4)ನೇ ಉಪಪ್ರಕರಣದ ಅಡಿಯಲ್ಲಿ ಗೊತ್ತುಪಡಿಸಲಾದ ದಿನಾಂಕ;

(ಸಿ) "ಜಿಲ್ಲಾಧಿಕಾರಿ" ಎಂಬ ಪದವು, ಈ ಅಧಿನಿಯಮದ ಅಡಿಯಲ್ಲಿ ಜಿಲ್ಲಾಧಿಕಾರಿಯ ಅಧಿಕಾರಗಳನ್ನು ಚಲಾಯಿಸಲು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಿದ ಉಪ ವಿಭಾಗಾಧಿಕಾರಿ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಯಾರೇ ಅಧಿಕಾರಿಯನ್ನು ಒಳಗೊಳ್ಳುತ್ತದೆ.

(ಡಿ) "ಇನಾಮು" ಎಂಬ ಪದವು, ಇನಾಮು ಗ್ರಾಮ ಮತ್ತು ಸಣ್ಣ ಇನಾಮನ್ನು ಒಳಗೊಳ್ಳುತ್ತದೆ;

(ಇ) "ಇನಾಮುದಾರ" ಎಂದರೆ,–

(i) ವೈಯಕ್ತಿಕ ಇನಾಮಿನ ಸಂದರ್ಭದಲ್ಲಿ, ಒಂದು ಇನಾಮು ಗ್ರಾಮವನ್ನು ಅಥವಾ ಅದರಲ್ಲಿನ ಪಾಲನ್ನು ನ್ಯಾಸವಾಗಿ ಹೊಂದಿರುವ ಅಥವಾ ತನ್ನ ಸ್ವಂತ ಪ್ರಯೋಜನಕ್ಕಾಗಿ ಒಡೆತನವನ್ನು ಹೊಂದಿರುವ ಒಬ್ಬ ವ್ಯಕ್ತಿ ಮತ್ತು ಅದು ಇನಾಮುದಾರನ ಹಿತಾಸಕ್ತಿಯಲ್ಲಿನ ಉತ್ತರಾಧಿಕಾರಿಗಳನ್ನು ಒಳಗೊಳ್ಳುತ್ತದೆ; ಮತ್ತು

(ಎ) ಇನಾಮುದಾರನು ಅಪ್ರಾಪ್ತ ವಯಸ್ಕನಾಗಿರುವಲ್ಲಿ ಅಥವಾ ಅಸ್ವಸ್ಥ ಮನಸ್ಕನಾಗಿರುವಲ್ಲಿ ಅಥವಾ ಹುಟ್ಟು ದಡ್ಡನಾಗಿರುವಲ್ಲಿ, ಅವನ ಪೋಷಕ, ಸಮಿತಿ, ಅಥವಾ ಇತರ ಕಾನೂನು ಸಮ್ಮತ ರಕ್ಷಕ;

(ಬಿ) ಇನಾಮುದಾರನು, ಹಿಂದೂ ಅವಿಭಕ್ತ ಕುಟುಂಬವಾಗಿದ್ದಲ್ಲಿ ಅಂಥ ಹಿಂದೂ ಅವಿಭಕ್ತ ಕುಟುಂಬ; ಮತ್ತು

(ii) ಧಾರ್ಮಿಕ ಅಥವಾ ಧರ್ಮಾರ್ಥ ಇನಾಮಿನ ಸಂದರ್ಭದಲ್ಲಿ ಇನಾಮಿನ ಒಡೆತನವನ್ನು ಹೊಂದಿರುವ ಧಾರ್ಮಿಕ ಅಥವಾ ಧರ್ಮಾರ್ಥ ಸಂಸ್ಥೆ;

(ಎಫ್) "ಇನಾಮು ಭೂಮಿ" ಅಥವಾ "ಇನಾಮು ಗ್ರಾಮ" ಎಂದರೆ, ಸಂದರ್ಭಾನುಸಾರ ಒಬ್ಬ ವ್ಯಕ್ತಿಯು ನ್ಯಾಸದ ರೂಪದಲ್ಲಿ ಇನಾಮಾಗಿ ಹೊಂದಿರುವ ಅಥವಾ ತನ್ನ ಸ್ವಂತ ಪ್ರಯೋಜನಕ್ಕಾಗಿ ಒಡೆತನವನ್ನು ಹೊಂದಿರುವ, ಭೂಮಿ ಅಥವಾ ಗ್ರಾಮ;

(ಜಿ) "ಭೂ ದಾಖಲೆಗಳು" ಎಂದರೆ, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಥವಾ ಈ ಅಧಿನಿಯಮದ ಉದ್ದೇಶಕ್ಕಾಗಿ ಅಥವಾ ಈ ಅಧಿನಿಯಮದ ಉದ್ದೇಶಗಳಿಗೆ ಸುಸಂಬದ್ಧವಾದ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಇಟ್ಟುಕೊಂಡು ಬಂದಿರುವ ದಾಖಲೆಗಳು;

(ಎಚ್) "ಸಣ್ಣ ಇನಾಮು" ಎಂದರೆ, ಪರಭಾರೆಯಾದ ಗ್ರಾಮದಲ್ಲಿ ಅಥವಾ ಪರಭಾರೆಯಾಗದ ಗ್ರಾಮದಲ್ಲಿ ಇರುವ ಒಂದು ಇನಾಮು ಗ್ರಾಮವಲ್ಲದ ಪರಭಾರೆಯಾದ ಹಿಡುವಳಿ;

(ಐ) "ಅಧಿಸೂಚನೆ" ಎಂದರೆ, ರಾಜ್ಯಪತ್ರದಲ್ಲಿ ಪ್ರಕಟವಾದ ಒಂದು ಅಧಿಸೂಚನೆ;

(ಜೆ) "ವ್ಯಕ್ತಿ" ಎಂಬುದು ಧಾರ್ಮಿಕ ಅಥವಾ ಧರ್ಮಾರ್ಥ ಸಂಸ್ಥೆಯನ್ನು ಮತ್ತು ಹಿಂದೂ ಅವಿಭಕ್ತ ಕುಟುಂಬದ ಸಂದರ್ಭದಲ್ಲಿ, ಅಂಥ ಹಿಂದೂ ಅವಿಭಕ್ತ ಕುಟುಂಬವನ್ನು ಒಳಗೊಳ್ಳುತ್ತದೆ;

(ಕೆ) "ವೈಯಕ್ತಿಕ ಇನಾಮು" ಎಂದರೆ, ಯಾರೇ ವ್ಯಕ್ತಿಗೆ ಭೂ ಕಂದಾಯದ ಸಂದಾಯವನ್ನು ಪೂರ್ಣವಾಗಿ ಅಥವಾ ಭಾಗಶಃವಾಗಿ ವಿನಾಯಿತಿಗೊಳಿಸಿ ಮತ್ತು "ದೇವಾದಾಯ" ಅಥವಾ "ಧರ್ಮಾದಾಯ" ವಲ್ಲದ ಇನಾಮು ಎಂದು ಭೂದಾಖಲೆಗಳಲ್ಲಿ ನಮೂದಿಸಿರುವ ಗ್ರಾಮ ಅಥವಾ ಭೂಮಿ ಮತ್ತು ಇದು ಧಾರ್ಮಿಕ ಅಥವಾ ಧರ್ಮಾರ್ಥ ಇನಾಮನ್ನು ಒಳಗೊಳ್ಳುವುದಿಲ್ಲ;

(ಎಲ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) "ಧಾರ್ಮಿಕ ಸಂಸ್ಥೆ" ಎಂಬುದು ದೇವಸ್ಥಾನವನ್ನು ಒಳಗೊಳ್ಳುತ್ತದೆ;

(ಎನ್) "ಧಾರ್ಮಿಕ ಅಥವಾ ಧರ್ಮಾರ್ಥ ಇನಾಮು" ಎಂದರೆ, ಧಾರ್ಮಿಕ ಮತ್ತು ಧರ್ಮಾರ್ಥ ಸಂಸ್ಥೆಗೆ ಅಥವಾ ಅದರ ಪ್ರಯೋಜನಕ್ಕಾಗಿ ಭೂ ಕಂದಾಯದ ಸಂದಾಯದಿಂದ ಪೂರ್ಣವಾಗಿ ಅಥವಾ ಭಾಗಶಃ ವಿನಾಯಿತಿ ಕೊಟ್ಟು ಮಂಜೂರು ಮಾಡಿದ ಒಂದು ಗ್ರಾಮ, ಗ್ರಾಮದ ಭಾಗ ಅಥವಾ ಭೂಮಿ;

**ವಿವರಣೆ.–** ಯಾವುದೇ ಮಂಜೂರಾತಿಯು ವೈಯಕ್ತಿಕ ಇನಾಮೇ ಅಥವಾ ಧಾರ್ಮಿಕ ಅಥವಾ ಧರ್ಮಾರ್ಥ ಇನಾಮೇ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಅಂಥ ಪ್ರಶ್ನೆಯನ್ನು ರಾಜ್ಯ ಸರ್ಕಾರಕ್ಕೆ ಉಲ್ಲೇಖಿಸತಕ್ಕದ್ದು ಹಾಗೂ ಅದರ ನಿರ್ಣಯವೇ ಅಂತಿಮವಾಗಿರತಕ್ಕದ್ದು;

(ಓ) "ಸಂಡೂರು ಪ್ರದೇಶ" ಎಂದರೆ, ಈ ಅಧಿನಿಯಮದ ಅನುಸೂಚಿ Iರಲ್ಲಿ ನಿರ್ದಿಷ್ಟಪಡಿಸಿದ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಗ್ರಾಮಗಳು;

(ಪಿ) "ನ್ಯಾಯಾಧಿಕರಣ" ಎಂದರೆ, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ 48ನೇ ಪ್ರಕರಣದ ಅಡಿಯಲ್ಲಿ ರಚಿತವಾದ ನ್ಯಾಯಾಧಿಕರಣ.

(2) ಈ ಅಧಿನಿಯಮದಲ್ಲಿ ಉಪಯೋಗಿಸಲಾಗಿರುವ, ಆದರೆ ಈ ಅಧಿನಿಯಮದಲ್ಲಿ ವ್ಯಾಖ್ಯೆಗೊಳಿಸಿದ ಪದಗಳಿಗೆ ಮತ್ತು ಪದಾವಳಿಗಳಿಗೆ ಈ ಅಧಿನಿಯಮದಲ್ಲಿ ಅಥವಾ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರಲ್ಲಿ (1962ರ ಕರ್ನಾಟಕ ಅಧಿನಿಯಮ 10) ಅವುಗಳಿಗೆ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ -II

### ರಾಜ್ಯದಲ್ಲಿನ ಇನಾಮುಗಳ ರದ್ದಿಯಾತಿ ಮತ್ತು ಅವುಗಳನ್ನು ನಿಹಿತಗೊಳಿಸುವುದು ಮತ್ತು ಅದರ ಪರಿಣಾಮಗಳು.

**3. ಇನಾಮುಗಳ ರದ್ದಿಯಾತಿ, ಅವುಗಳನ್ನು ನಿಹಿತಗೊಳಿಸುವುದು ಮತ್ತು ಅದರ ಪರಿಣಾಮಗಳು.–** ಯಾವುದೇ ಕರಾರಿನಲ್ಲಿ, ಮಂಜೂರಾತಿಯಲ್ಲಿ ಅಥವಾ ಇತರ ಲಿಖಿತ ಪತ್ರ ಅಥವಾ ನ್ಯಾಯಾಲಯದ ಯಾವುದೇ ಡಿಕ್ರಿ ಅಥವಾ ಆದೇಶದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸಂಡೂರು ಪ್ರದೇಶದಲ್ಲಿನ ಎಲ್ಲ ಇನಾಮುಗಳ ಮತ್ತು ಸಣ್ಣ ಇನಾಮುಗಳ ಅವಧಿಯು ಗೊತ್ತುಪಡಿಸಿದ ದಿನಾಂಕದಿಂದ ಮತ್ತು ದಿನಾಂಕದಂದು ರದ್ದಾಗತಕ್ಕದ್ದು.

(2) ಈ ಅಧಿನಿಯಮದಲ್ಲಿ ಅನ್ಯಥಾ ನಿರ್ದಿಷ್ಟವಾಗಿ ಉಪಬಂಧಿಸಿದುದನ್ನು ಹೊರತುಪಡಿಸಿ, ಗೊತ್ತುಪಡಿಸಿದ ದಿನಾಂಕದಂದು ಮತ್ತು ಅಂದಿನಿಂದ ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ.–

(ಎ) ಇನಾಮುಗಳಿಗೆ ಅಥವಾ ಪರಭಾರೆಯಾದ ಹಿಡುವಳಿಗೆ ಸಂಬಂಧಿಸಿದ ಅಧಿನಿಯಮದ ಉಪಬಂಧಗಳು, ಸದರಿ ಇನಾಮು ಅಥವಾ ಪರಭಾರೆ ಮಾಡಿದ ಹಿಡುವಳಿಗೆ ಅವು ಅನ್ವಯವಾಗುವಲ್ಲಿ ನಿರಸಿತವಾಗಿವೆಯೆಂದು ಭಾವಿಸತಕ್ಕದ್ದು ಮತ್ತು

ಪರಭಾರೆಯಾಗಿರದ ಗ್ರಾಮಗಳಿಗೆ ಅಥವಾ ಭೂಮಿಗಳಿಗೆ ಅನ್ವಯವಾಗುವ ಈ ಅಧಿನಿಯಮದ ಮತ್ತು ಎಲ್ಲ ಇತರ ಅಧಿನಿಯಮಿತಿಗಳ ಉಪಬಂಧಗಳು ಸದರಿ ಇನಾಮು ಅಥವಾ ಪರಭಾರೆ ಮಾಡಿದ ಹಿಡುವಳಿಗೆ ಅನ್ವಯವಾಗತಕ್ಕದ್ದು;

(ಬಿ) ಎಲ್ಲ ಸಾಮುದಾಯಿಕ ಭೂಮಿಗಳಲ್ಲಿ, ಸಾಗುವಳಿ ಭೂಮಿಗಳಲ್ಲಿ, ಸಾಗುವಳಿಯಾಗಿರದ ಭೂಮಿಗಳಲ್ಲಿ ಅವುಗಳ ಕಂದಾಯ ನಿರ್ಧಾರವಾಗಿರಲಿ ಅಥವಾ ಆಗದಿರಲಿ, ಬಂಜರು ಭೂಮಿಗಳಲ್ಲಿ, ಹುಲ್ಲುಗಾವಲುಗಳಲ್ಲಿ, ಅರಣ್ಯಗಳಲ್ಲಿ, ಗಣಿಗಳಲ್ಲಿ ಮತ್ತು ಖನಿಜಗಳಲ್ಲಿ, ಕಲ್ಲುಗಣಿಗಳಲ್ಲಿ, ನದಿಗಳಲ್ಲಿ ಮತ್ತು ತೊರೆಗಳಲ್ಲಿ, ಕೆರೆಗಳಲ್ಲಿ ಮತ್ತು ನೀರಾವರಿ ಕಾಮಗಾರಿಗಳಲ್ಲಿ, ಮೀನುಗಾರಿಕೆಯಲ್ಲಿ ಮತ್ತು ಹಾಯಿ ದೋಣಿಗಳಲ್ಲಿ ಇರುವ ಹಕ್ಕುಗಳನ್ನು ಒಳಗೊಂಡು ಇನಾಮುದಾರನಲ್ಲಿ ನಿಹಿತವಾಗಿರುವ ಎಲ್ಲ ಹಕ್ಕುಗಳು, ಒಡೆತನ ಮತ್ತು ಹಿತಾಸಕ್ತಿಯು ಕೊನೆಗೊಳ್ಳತಕ್ಕದ್ದು ಮತ್ತು ಎಲ್ಲ ಪೂರ್ವಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ಸಂಪೂರ್ಣವಾಗಿ ನಿಹಿತವಾಗತಕ್ಕದ್ದು;

(ಸಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅಡಿಯಲ್ಲಿ ನಿರ್ದಿಷ್ಟವಾಗಿ ಉಳಿಸಲಾದ ಹಿತಾಸಕ್ತಿಗಳಲ್ಲದ ಇನಾಮಿನಲ್ಲಿನ ಯಾವುದೇ ಇತರ ಹಿತಾಸಕ್ತಿಯನ್ನು ಇನಾಮುದಾರನು ಹೊಂದಿರುವುದು ನಿಂತು ಹೋಗತಕ್ಕದ್ದು.

(ಡಿ) ನಿಹಿತವಾದ ದಿನಾಂಕದಂದು ಅಥವಾ ಆ ನಂತರ ಅಂಥ ಇನಾಮು ಗ್ರಾಮಗಳಲ್ಲಿ ಅಥವಾ ಸಣ್ಣ ಇನಾಮುಗಳಲ್ಲಿ ಒಳಗೊಂಡಿರುವ ಭೂಮಿಗಳ ಸಂಬಂಧದಲ್ಲಿ ಪ್ರಾಪ್ತವಾಗುವ ಉಪಕರಗಳು ಮತ್ತು ಗೌರವಧನಗಳೂ ಒಳಗೊಂಡಂತೆ ಎಲ್ಲ ಬಾಡಿಗೆಗಳನ್ನು ಮತ್ತು ಭೂ ಕಂದಾಯವನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು ಮತ್ತು ಇನಾಮುದಾರನಿಗೆ ಸಂದಾಯ ಮಾಡತಕ್ಕದ್ದಲ್ಲ ಮತ್ತು ಈ ಖಂಡವನ್ನು ಉಲ್ಲಂಘಿಸಿ ಮಾಡಿದ ಯಾವುದೇ ಸಂದಾಯವು ಸಿಂಧುವಾಗತಕ್ಕದ್ದಲ್ಲ;

(ಇ) ಯಾವುದೇ ಅಂಥ ಇನಾಮು ಗ್ರಾಮ ಅಥವಾ ಸಣ್ಣ ಇನಾಮಿನ ಸಂಬಂಧದಲ್ಲಿ ನಿಹಿತವಾಗುವ ದಿನಾಂಕದಂದು ಕಾನೂನುಬದ್ಧವಾಗಿ ಬಾಕಿ ಉಳಿದಿರುವ ಭೂ ಕಂದಾಯದ ಎಲ್ಲ ಬಾಕಿಗಳನ್ನು ಅವು ಜೋಡಿಯಾಗಿರಲಿ ಅಥವಾ ಜೋಡಿ ಕಂದಾಯವಾಗಿರಲಿ ಮತ್ತು ಕರಗಳನ್ನು ಅಂಥ ದಿನಾಂಕದ ನಂತರ ಯಾವ ಇನಾಮುದಾರನು ಅವುಗಳನ್ನು ಸಂದಾಯ ಮಾಡಬೇಕಾಗಿದ್ದಿತೋ ಆ ಇನಾಮುದಾರನಿಂದ ವಸೂಲಿ ಮಾಡುವುದು ಮುಂದುವರಿಯತಕ್ಕದ್ದು ಮತ್ತು ವಸೂಲಿಯ ಇತರ ಯಾವುದೇ ವಿಧಾನಕ್ಕೆ ಬಾಧೆ ಬಾರದಂತೆ ಈ ಅಧಿನಿಯಮದ ಅಡಿಯಲ್ಲಿ ಅಂಥ ಬಾಕಿಗಳ ಮತ್ತು ಉಪಕರಗಳ ಮೊತ್ತವನ್ನು ಅಂಥ ಇನಾಮುದಾರನಿಗೆ ಸಂದಾಯ ಮಾಡಬೇಕಾದ ಮೊಬಲಗಿನಿಂದ ಮುರಿದುಕೊಳ್ಳುವ ಮೂಲಕ ವಸೂಲಿ ಮಾಡಬಹುದು;

(ಎಫ್) ಅಂಥ ಯಾವುದೇ ಇನಾಮು, ಯಾವುದೇ ನ್ಯಾಯಾಲಯದ ಡಿಕ್ರಿಯ ಅಥವಾ ಇತರ ಕಾನೂನು ಕ್ರಮದ ಅಮಲ್ಜಾರಿಯಲ್ಲಿ ಜಪ್ತಿಗೆ ಗುರಿಯಾಗತಕ್ಕದ್ದಲ್ಲ ಮತ್ತು ನಿಹಿತವಾಗುವ ದಿನಾಂಕದಂದು ಅಂಥ ಇನಾಮು ಗ್ರಾಮ ಅಥವಾ ಸಣ್ಣ ಇನಾಮಿನ ಸಂಬಂಧದಲ್ಲಿ ಅಸ್ತಿತ್ವದಲ್ಲಿರುವ ಯಾವುದೇ ಜಪ್ತಿಯು ಅಥವಾ ಅಂಥ ದಿನಾಂಕಕ್ಕೆ ಮುಂಚೆ ಹೊರಡಿಸಿದ ಜಪ್ತಿಯ ಇತರ ಯಾವುದೇ ಆದೇಶವು ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು;

(ಜಿ) ರಾಜ್ಯ ಸರ್ಕಾರವು, ಉಂಟಾಗಬಹುದಾದ ಅಡ್ಡಿಯನ್ನು ನಿವಾರಿಸಿದ ನಂತರ ಇನಾಮು ಮತ್ತು ಅದರ ಆಡಳಿತಕ್ಕಾಗಿ ಇನಾಮಿಗೆ ಸಂಬಂಧಿಸಿದ, ರಾಜ್ಯಸರ್ಕಾರಕ್ಕೆ ಅಗತ್ಯವಾಗಬಹುದಾದ ಎಲ್ಲ ಲೆಕ್ಕಪತ್ರಗಳನ್ನು, ರಿಜಿಸ್ಟರ್‌ಗಳನ್ನು, ಪಟ್ಟಾಗಳನ್ನು, ಮುಚ್ಚಳಿಕೆಗಳನ್ನು, ನಕಾಶೆಗಳನ್ನು, ಯೋಜನೆಗಳನ್ನು ಇತರ ದಸ್ತಾವೇಜುಗಳನ್ನು ಕೂಡಲೇ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು;

(ಹೆಚ್) ಯಾವ ಇನಾಮುದಾರನ ಹಕ್ಕುಗಳು (ಬಿ) ಖಂಡದ ಅಡಿಯಲ್ಲಿ ರಾಜ್ಯಸರ್ಕಾರದಲ್ಲಿ ನಿಹಿತವಾಗಿವೆಯೋ ಅವನು ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಅಂಥ ಮೊಬಲಗನ್ನು ಮಾತ್ರ ರಾಜ್ಯಸರ್ಕಾರದಿಂದ ಪಡೆಯಲು ಹಕ್ಕುಳ್ಳವನಾಗಿರತಕ್ಕದು;

(ಐ) ಇನಾಮುದಾರನ ಮತ್ತು ಸಣ್ಣ ಇನಾಮುದಾರನ ನಡುವೆ ಇರುವ ಗರಿಷ್ಠ ಹಿಡುವಳಿದಾರ ಮತ್ತು ಕನಿಷ್ಠ ಹಿಡುವಳಿದಾರ ಎಂಬ ಸಂಬಂಧವು ಇಲ್ಲವಾಗತಕ್ಕದ್ದು;

(ಜೆ) ಇನಾಮಿನ ಗೇಣಿದಾರರು ಮತ್ತು ಅವರ ಅಧೀನದಲ್ಲಿ ಹಿಡುವಳಿಯನ್ನು ಹೊಂದಿರುವ ವ್ಯಕ್ತಿಗಳು ಮತ್ತು ಸಣ್ಣ ಇನಾಮುಗಳ ಧಾರಕರು, ರಾಜ್ಯಸರ್ಕಾರಕ್ಕೆ ಸಂಬಂಧಿಸಿದಂತೆ, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಉಪಬಂಧಿಸಿರುವಂಥ ಹಕ್ಕುಗಳಿಗೆ ಮತ್ತು ವಿಶೇಷಾಧಿಕಾರಗಳಿಗೆ ಮಾತ್ರ ಹಕ್ಕುಳ್ಳವರಾಗಿರತಕ್ಕದ್ದು ಮತ್ತು ಅಂಥ ಷರತ್ತುಗಳಿಗೆ ಮತ್ತು ಇನಾಮುದಾರನಿಗೆ ವಿರುದ್ಧವಾಗಿ ನಿಹಿತವಾಗುವ ದಿನಾಂಕಕ್ಕೆ ಮುಂಚೆ ಇನಾಮಿನಲ್ಲಿ ಅವರಿಗೆ ಪ್ರಾಪ್ತವಾಗಿರಬಹುದಾದ ಇತರ ಯಾವುವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳು ಕೊನೆಗೊಳ್ಳತಕ್ಕದ್ದು ಮತ್ತು ಮುಕ್ತಾಯಗೊಳ್ಳತಕ್ಕದ್ದು, ಇತ್ಯರ್ಥವಾಗತಕ್ಕದ್ದು ಮತ್ತು ಅವುಗಳನ್ನು ರಾಜ್ಯಸರ್ಕಾರದ ಅಥವಾ ಅಂಥ ಇನಾಮುದಾರನ ವಿರುದ್ಧ ಜಾರಿಗೊಳಿಸತಕ್ಕದ್ದಲ್ಲ;

(3) (1)ನೇ ಉಪ–ಪ್ರಕರಣದಲ್ಲಿ ಅಥವಾ (2)ನೇ ಉಪ–ಪ್ರಕರಣದಲ್ಲಿ ಇರುವ ಯಾವುದೂ, ನಿಹಿತವಾಗುವ ದಿನಾಂಕಕ್ಕೆ ಮುಂಚಿತವಾಗಿ ಇನಾಮುದಾರನಾಗಿ ತನಗಿರುವ ಹಕ್ಕುಗಳ ಕಾರಣದಿಂದಾಗಿ, ತನಗೆ ಬರಬೇಕಾಗಿರುವ ಯಾವುದೇ ಮೊತ್ತವನ್ನು ಆತನು ವಸೂಲು ಮಾಡುವುದಕ್ಕೆ ಪ್ರತಿಷೇಧವಾಗಿ ಪರಿಣಮಿಸತಕ್ಕದ್ದಲ್ಲ ಮತ್ತು ಈ ಅಧಿನಿಯಮವು ಇಲ್ಲವಾಗಿದ್ದರೆ, ಅವನಿಗೆ ಲಭ್ಯವಾಗಬಹುದಾಗಿದ್ದ ಅಂಥ ಯಾವುದೇ ಮೊತ್ತವನ್ನು ಕಾನೂನಿನ ಯಾವುದೇ ಕ್ರಮದ ಮೂಲಕ ಆತನು ವಸೂಲಿ ಮಾಡಬಹುದು.

**4. ಅನುಭೋಗದಾರರಾಗಿ ನೋಂದಾಯಿತರಾಗುವ ಹಕ್ಕು.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಹೊರತುಪಡಿಸಿ ಮತ್ತು ಗೊತ್ತುಪಡಿಸಿದ ದಿನಾಂಕದಿಂದ ಮತ್ತು ದಿನಾಂಕದಂದು,–

(1) ಇನಾಮುದಾರನ ಅಥವಾ ಸಣ್ಣ ಇನಾಮುಧಾರಕನ ಪ್ರತಿಯೊಬ್ಬ ಗೇಣಿದಾರನು 1974ರ ಮಾರ್ಚ್ 1ನೇ ದಿನಾಂಕದ ನಿಕಟಪೂರ್ವದಲ್ಲಿ ಯಾವ ಭೂಮಿಗಳ ಸಂಬಂಧದಲ್ಲಿ ಅವನು ಗೇಣಿದಾರನಾಗಿದ್ದನೋ ಅವುಗಳಿಗೆ ಸಂಬಂಧಿಸಿದಂತೆ ಅನುಭೋಗದಾರನಾಗಿ ನೊಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು;

(2) ಇನಾಮುದಾರನು, ಧಾರ್ಮಿಕ ಪೂಜೆಯ ಒಂದು ಸಂಸ್ಥೆಯಾಗಿದ್ದರೆ,–

(i) ಅವನು ಪೂಜಾರಿಯಾಗಿ, ಅರ್ಚಕನಾಗಿ ಅಥವಾ ಯಾವುದೇ ಹೆಸರಿನಿಂದ ಕರೆಯುವ ಅಂಥದೇ ಹುದ್ದೆಯಲ್ಲಿ ಆ ಸಂಸ್ಥೆಯಲ್ಲಿ ಧಾರ್ಮಿಕ ಸೇವೆಯನ್ನು ಸಲ್ಲಿಸುತ್ತಿರುವ ಅಥವಾ ಆ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿರುವ; ಅಥವಾ

(ii) ಅಂಥ ಸಂಸ್ಥೆಯಲ್ಲಿ ಯಾವುದೇ ಸೇವೆಯನ್ನು ಸಲ್ಲಿಸುತ್ತಿರುವ ಮತ್ತು ತನ್ನ ಸ್ವಂತ ದೈಹಿಕ ಶ್ರಮದಿಂದ ಅಥವಾ ತನ್ನ ಕುಟುಂಬದ ಸದಸ್ಯರ ದೈಹಿಕ ಶ್ರಮದಿಂದ 1974ರ ಮಾರ್ಚ್ ಒಂದನೇ ದಿನಾಂಕಕ್ಕಿಂತ ಮುಂಚೆ ಮೂರು ವರ್ಷಗಳಿಗೆ ಕಡಿಮೆಯಿಲ್ಲದ ನಿರಂತರ ಅವಧಿಯವರೆಗೆ ಸ್ವಂತವಾಗಿ ಸಾಗುವಳಿ ಮಾಡುತ್ತಿದ್ದು ಮತ್ತು ಅಂಥ ಭೂಮಿಯ ಸಂಬಂಧದಲ್ಲಿ ಆ ಸಂಸ್ಥೆಗೆ ಹಣದ ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ಗೇಣಿಯನ್ನು ಕೊಡದೆ, ಅಂಥ ಸಂಸ್ಥೆಯ ಇನಾಮಿನಲ್ಲಿ ಒಳಗೊಂಡಿರುವ ಯಾವುದೇ ಭೂಮಿಯ ಪ್ರಯೋಜನಗಳನ್ನು ಪಡೆಯುತ್ತಿರುವ ಯಾರೇ ವ್ಯಕ್ತಿಯು

– ಅಂಥ ಭೂಮಿಯ ಅನುಭೋಗದಾರನಾಗಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು;

(3) ಸಣ್ಣ ಇನಾಮುಧಾರಕನನ್ನು ಒಳಗೊಂಡು ಪ್ರತಿಯೊಬ್ಬ ಇನಾಮುದಾರನು, ಸದರಿ ದಿನಾಂಕದ ನಿಕಟಪೂರ್ವದಲ್ಲಿ ತಾನೇ ಖುದ್ದಾಗಿ ಕೃಷಿ ಮಾಡುತ್ತಿದ್ದ ಎಲ್ಲ ಭೂಮಿಗಳ ಅನುಭೋಗದಾರನಾಗಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

**5. ಕೆಲವು ಭೂಮಿಗಳನ್ನು ನೋಂದಾಯಿಸತಕ್ಕದ್ದಲ್ಲ.–** ಯಾವ ಸಣ್ಣ ಇನಾಮುದಾರನಾಗಲಿ ಮತ್ತು ಯಾವ ಇನಾಮುದಾರನಾಗಲಿ,–

(i) ಸಮುದಾಯದ ಭೂಮಿಗಳ, ಸಾಗುವಳಿಯಾಗಿರದ ಭೂಮಿಗಳ, ಬಂಜರು ಭೂಮಿಗಳ, ಗೋಮಾಳ, ಅರಣ್ಯ ಭೂಮಿಗಳ, ಕೆರೆ ಅಂಗಳಗಳ, ಗಣಿಗಳ, ಕಲ್ಲುಗಣಿಗಳ, ನದಿಗಳ, ತೊರೆಗಳ, ಕೆರೆಗಳ ಮತ್ತು ನೀರಾವರಿ ಕಾಮಗಾರಿಗಳ;

(ii) ಅಂಥ ಸಣ್ಣ ಇನಾಮುಧಾರಕನಲ್ಲದ ಯಾರೇ ವ್ಯಕ್ತಿಯ ಒಡೆತನದಲ್ಲಿರುವ ಕಟ್ಟಡಗಳನ್ನು ಆ ಯಾವ ಭೂಮಿಗಳ ಮೇಲೆ ನಿರ್ಮಿಸಲಾಗಿದೆಯೋ ಆ ಭೂಮಿಗಳ

– ಅನುಭೋಗದಾರನೆಂದು ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**6. ಕಟ್ಟಡಗಳನ್ನು ನಿಹಿತಗೊಳಿಸುವುದು.–** (1) ಗೊತ್ತುಪಡಿಸಿದ ದಿನಾಂಕದ ನಿಕಟಪೂರ್ವದಲ್ಲಿ ಸಂದರ್ಭಾನುಸಾರ ಸಣ್ಣ ಇನಾಮುಧಾರಕನು ಅಥವಾ ಇನಾಮುದಾರನು ಒಡೆತನ ಹೊಂದಿರುವ ಸಣ್ಣ ಇನಾಮಿನ ಅಥವಾ ಇನಾಮಿನ ಪರಿಮಿತಿಗಳೊಳಗೆ ಇರುವ (2)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿತವಾದ ಕಟ್ಟಡವನ್ನು ಹೊರತುಪಡಿಸಿ, ಇತರ ಪ್ರತಿಯೊಂದು ಕಟ್ಟಡವು, ಸಣ್ಣ ಇನಾಮುಧಾರಕನಲ್ಲಿ ಅಥವಾ ಇನಾಮುದಾರನಲ್ಲಿ ಅಂಥ ದಿನಾಂಕದಿಂದ ನಿಹಿತವಾಗತಕ್ಕದ್ದು.

(2) ಇನಾಮಿನ ಪರಿಮಿತಿಗಳೊಳಗೆ ಇರುವ ಪ್ರತಿಯೊಂದು ಖಾಸಗಿ ಕಟ್ಟಡವು, ಸದರಿ ದಿನಾಂಕದಿಂದ ಜಾರಿಗೆ ಬರುವಂತೆ, ಆ ದಿನಾಂಕದ ನಿಕಟಪೂರ್ವದಲ್ಲಿ ಅದರ ಒಡೆತನ ಹೊಂದಿದ್ದ ವ್ಯಕ್ತಿಯಲ್ಲಿ ನಿಹಿತವಾಗತಕ್ಕದ್ದು.

(3) (1) ಮತ್ತು (2)ನೇ ಉಪ–ಪ್ರಕರಣಗಳಲ್ಲಿ ಏನೇ ಇದ್ದರೂ, ಒಬ್ಬ ಗೇಣಿದಾರನು, ಇನಾಮುದಾರನಿಗೆ ಅಥವಾ ಸಣ್ಣ ಇನಾಮುಧಾರಕನಿಗೆ ಸೇರಿದ ನಿವೇಶನದಲ್ಲಿರುವ ವಾಸದ ಮನೆಯನ್ನು ಅನುಭೋಗಿಸುತ್ತಿದ್ದಲ್ಲಿ, ಅಂಥ ಗುತ್ತಿಗೆದಾರನನ್ನು ಅಲ್ಲಿಂದ ಹೊರಹಾಕತಕ್ಕದ್ದಲ್ಲ, ಆದರೆ ಅದರ ಮಾಲೀಕತ್ವವಿರುವವರೊಂದಿಗೆ ಸಮಾಲೋಚಿಸತಕ್ಕದ್ದು ಮತ್ತು ಆ ನಿವೇಶನಕ್ಕೆ ಸಂಬಂಧಿಸಿದಂತೆ,–

(i) ಭೂಮಿಯ ಬಗ್ಗೆ ಸಂದಾಯವಾಗಬೇಕಾದ ಭೂ ಕಂದಾಯವನ್ನು;

(ii) ವಾಸದ ಮನೆಯನ್ನು ಯಾರು ಕಟ್ಟಿದವರೆಂಬುದನ್ನು; ಮತ್ತು

(iii) ನಿಯಮಿಸಬಹುದಾದಂಥ ಇತರ ಅಂಶಗಳನ್ನು

– ಗಮನಿಸಿ ನ್ಯಾಯಾಧಿಕರಣವು ನಿಗದಿಪಡಿಸಬಹುದಾದಂಥ ಮೊಬಲಗನ್ನು ಸಂದಾಯ ಮಾಡಿದ ನಂತರ ನಿವೇಶನದ ಒಡೆತನವನ್ನು ನೀಡತಕ್ಕದ್ದು.

**7. ಕೃಷಿಯೇತರ ಉದ್ದೇಶಗಳಿಗಾಗಿ ಉಪಯೋಗಿಸಲಾದ ಕೃಷಿ ಭೂಮಿಯ ಹಕ್ಕು.–** (1) ಕೃಷಿ ಉದ್ದೇಶಕ್ಕಾಗಿ ಉಪಯೋಗಿಸಿದ ಯಾವುದೇ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಸಲು ಪರಿವರ್ತಿಸಿರುವಲ್ಲಿ, ಅಂಥ ಭೂಮಿಯನ್ನು ಹೊಂದಿರುವವನು, 6ನೇ ಪ್ರಕರಣದ (3)ನೇ ಉಪ–ಪ್ರಕರಣದ ಉಪಬಂಧಗಳಿಗೆ ಮತ್ತು ಈ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಆ ಭೂಮಿಯನ್ನು ಇಟ್ಟುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(2) ಪರಿವರ್ತಿಸಲಾದ ಭೂಮಿಯು, ಪರಿವರ್ತನೆಯ ಸಮಯದಲ್ಲಿ ಗೇಣಿದಾರನ ಅನುಭೋಗದಲ್ಲಿದ್ದಲ್ಲಿ ಮತ್ತು ಪರಿವರ್ತಿತವಾದ ಭೂಮಿಯನ್ನು ಯಾವ ಕೃಷಿಯೇತರ ಉಪಯೋಗಕ್ಕಾಗಿ ಅದನ್ನು ಪರಿವರ್ತಿಸಲಾಯಿತೋ ಅದಕ್ಕಾಗಿ ಆ ಭೂಮಿಯನ್ನು ಉಪಯೋಗಿಸಲಾಗಿರದಿದ್ದಲ್ಲಿ ಅಂಥ ಭೂಮಿಯನ್ನು, ಈ ಅಧಿನಿಯಮದ ಇತರ ಉಪಬಂಧಗಳಿಗೊಳಪಟ್ಟು ಗೇಣಿದಾರನ ಹೆಸರಿನಲ್ಲಿ ನೋಂದಾಯಿಸತಕ್ಕದ್ದು:

ಆದರೆ, ಆ ಹಿಡುವಳಿದಾರನು ಅಂಥ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಸಲು ಸಾಧ್ಯವಾದುದನ್ನೆಲ್ಲಾ ಮಾಡಿದ್ದಾನೆಂದು, ಆದರೆ, ತನ್ನ ನಿಯಂತ್ರಣಕ್ಕೆ ಮೀರಿದ ಕಾರಣಗಳಿಂದಾಗಿ ಹಾಗೆ ಮಾಡಲು ಸಾಧ್ಯವಾಗಿಲ್ಲವೆಂದು ರಾಜ್ಯಸರ್ಕಾರಕ್ಕೆ ಮನದಟ್ಟಾದರೆ, ಅದು ಲಿಖಿತ ಆದೇಶದ ಮೂಲಕ ಆ ಭೂಮಿಯನ್ನು ಇಟ್ಟುಕೊಳ್ಳಲು ಹಿಡುವಳಿದಾರನಿಗೆ ಅನುಮತಿ ನೀಡಬಹುದು:

ಹಾಗೆಯೇ ಈ ಹಿಂದಿನ ಪರಂತುಕದಲ್ಲಿ ಉಲ್ಲೇಖಿತವಾದ ಸಂದರ್ಭದಲ್ಲಿ, ಗೇಣಿದಾರನು,-

(i) ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರಲ್ಲಿ ಏನೇ ಇದ್ದಾಗ್ಯೂ, ಆ ಅಧಿನಿಯಮದ 77ನೇ ಪ್ರಕರಣದ ಉದ್ದೇಶಗಳಿಗಾಗಿ ಹೊರಹಾಕಿದ ಗೇಣಿದಾರನೆಂದು ಪರಿಗಣಿಸತಕ್ಕದ್ದು;

(ii) 1973ರ ಸೆಪ್ಟೆಂಬರ್ 11 ರಂದು ಅಥವಾ ಆ ತರುವಾಯ ಪರಿವರ್ತನೆಗೊಂಡಿದ್ದಲ್ಲಿ, ಅವನು ಯಾವ ಭೂಮಿಗೆ ಗೇಣಿದಾರನಾಗಿದ್ದನೋ ಆ ಭೂಮಿಯ ಭೂ ಕಂದಾಯದ ನೂರುಪಟ್ಟು ಸಮನಾದ ಮೊಬಲಗನ್ನು ಸಂದಾಯ ಮಾಡತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿ ಇನಾಮುದಾರನಿಗೆ ಸಂದಾಯ ಮಾಡಬೇಕಾದ ಮೊತ್ತದಿಂದ ಸದರಿ ಮೊತ್ತವು ಅವನಿಗೆ ಸಂದಾಯವಾಗತಕ್ಕದ್ದು.

**8. ರಾಜ್ಯ ಸರ್ಕಾರಕ್ಕೆ ಭೂ ಕಂದಾಯವನ್ನು ಸಂದಾಯ ಮಾಡುವ ಹೊಣೆಗಾರಿಕೆ.–** (1) ಯಾವುದೇ ಭೂಮಿಗೆ ಸಂಬಂಧಿಸಿ 4ನೇ ಪ್ರಕರಣದ ಅಡಿಯಲ್ಲಿ ಒಬ್ಬ ಅನುಭೋಗದಾರನಾಗಿ ನೋಂದಾಯಿಸಿಕೊಳ್ಳಲು ಹಕ್ಕು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯೂ ಗೊತ್ತುಪಡಿಸಿದ ದಿನಾಂಕದಿಂದ ಮತ್ತು ದಿನಾಂಕದಂದು, ರಾಜ್ಯಸರ್ಕಾರಕ್ಕೆ, –

(ಎ) ಈ ಅಧಿನಿಯಮದ ಅಡಿಯಲ್ಲಿ ಮೋಜಣಿ ಮತ್ತು ಕಂದಾಯ ವ್ಯವಸ್ಥೆ ಮಾಡಿರುವ ಇನಾಮು ಗ್ರಾಮದ ಸಂದರ್ಭದಲ್ಲಿ ಅಂಥ ಮೋಜಣಿ ಮತ್ತು ಕಂದಾಯ ವ್ಯವಸ್ಥೆಯ ಅವಧಿಯಲ್ಲಿ ಅಂಥ ಭೂಮಿಯ ಮೇಲೆ ನಿಗದಿಪಡಿಸಿದ ಭೂ ಕಂದಾಯಕ್ಕೆ ಸಮನಾದ ಮೊಬಲಗನ್ನು;

(ಬಿ) ಈ ಅಧಿನಿಯಮದ ಅಡಿಯಲ್ಲಿ ಮೋಜಣಿ ಮತ್ತು ಕಂದಾಯ ವ್ಯವಸ್ಥೆ ಮಾಡದಿರುವ ಇನಾಮು ಗ್ರಾಮದ ಸಂದರ್ಭದಲ್ಲಿ, ಪರಭಾರೆಯಾಗದ ಪಕ್ಕದ ಗ್ರಾಮದಲ್ಲಿರುವ ಅಂಥದೇ ವಿಸ್ತೀರ್ಣದ ಭೂಮಿಯ ಮೇಲೆ ವಿಧಿಸಿದ ಭೂ ಕಂದಾಯಕ್ಕೆ ಸಮನಾದ ಮೊಬಲಗನ್ನು

– ಭೂ ಕಂದಾಯದಂತೆ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

(2) ಜಿಲ್ಲಾಧಿಕಾರಿಯು ತಾನು ಸೂಕ್ತವೆಂದು ಆಲೋಚಿಸುವಂಥ ವಿಚಾರಣೆ ನಡೆಸಿದ ತರುವಾಯ (1)ನೇ ಉಪ–ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಸಂದಾಯ ಮಾಡಬೇಕಾದ ಭೂ ಕಂದಾಯವನ್ನು ನಿರ್ಧರಿಸತಕ್ಕದ್ದು.

**9. ಕೆಲವು ಪ್ರಕರಣಗಳಲ್ಲಿ ಹಕ್ಕನ್ನು ರಕ್ಷಿಸುವುದು.–** (1) ಇನಾಮುದಾರನು, ಗೊತ್ತುಪಡಿಸಿದ ದಿನಾಂಕಕ್ಕಿಂತ ಮುಂಚೆ ರಾಜ್ಯಸರ್ಕಾರದಲ್ಲಿ ನಿಹಿತವಾಗಿರುವ ಯಾವುದೇ ಭೂಮಿಯಲ್ಲಿ ಯಾವುದೇ ಗಣಿಗಳಲ್ಲಿನ ಅಥವಾ ಖನಿಜಗಳಲ್ಲಿನ, ಕಲ್ಲುಗಣಿಗಳಲ್ಲಿನ, ಮೀನುಗಾರಿಕೆಗಳಲ್ಲಿನ, ಹಾಯಿದೋಣಿಗಳಲ್ಲಿನ ಅಥವಾ ಅರಣ್ಯಗಳಲ್ಲಿನ ಹಕ್ಕುಗಳೂ ಒಳಗೊಂಡಂತೆ 4ನೇ ಪ್ರಕರಣದ ಅಡಿಯಲ್ಲಿ ನೋಂದಾಯಿತವಾದ, ಸರ್ಕಾರದಲ್ಲಿ ನಿಹಿತವಾಗಿರುವ ಯಾವುದೇ ಭೂಮಿಯಲ್ಲಿನ ಯಾವುದೇ ಹಕ್ಕನ್ನು ಸೃಜಿಸಿರುವಲ್ಲಿ ಆ ವ್ಯವಹಾರವನ್ನು ಸಿಂಧುವಾದುದೆಂದು ಭಾವಿಸತಕ್ಕದ್ದು ಮತ್ತು ಗೊತ್ತುಪಡಿಸಿದ ದಿನಾಂಕದಂದು ಅಥವಾ ದಿನಾಂಕದ ತರುವಾಯ ಅದರಡಿಯಲ್ಲಿ ಉದ್ಭವಿಸುವ ಎಲ್ಲ ಹಕ್ಕುಗಳು ಮತ್ತು ಬಾಧ್ಯತೆಗಳನ್ನು ರಾಜ್ಯಸರ್ಕಾರದಿಂದ ಅಥವಾ ಅದಕ್ಕೆ ವಿರುದ್ಧವಾಗಿ ಜಾರಿಗೊಳಿಸಬಹುದಾಗಿರತಕ್ಕದ್ದು:

ಆದರೆ, ಆ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಆ ವ್ಯವಹಾರವು ಅನೂರ್ಜಿತ ಅಥವಾ ಕಾನೂನುಬಾಹಿರವಾಗಿರತಕ್ಕದ್ದಲ್ಲ:

ಹಾಗೆಯೇ ಯಾವುದೇ ಭೂಮಿಯಲ್ಲಿ ಅಂಥ ಹಕ್ಕನ್ನು ಸೃಜಿಸಿದ್ದಲ್ಲಿ ಅದು 4ನೇ ಪ್ರಕರಣದ ಅಡಿಯಲ್ಲಿ ನೊಂದಾಯಿಸಿದ ಭೂಮಿಗಳಿಗೆ ಸಂಬಂಧಪಟ್ಟಿದ್ದ ಹೊರತು ಹಾಗೆ ಮಾಡುವುದು ಸಾರ್ವಜನಿಕ ಹಿತಾಸಕ್ತಿಯಿಂದ ಎಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟಲ್ಲಿ, ಸಂಬಂಧಿಸಿದ ವ್ಯಕ್ತಿಗೆ ನೋಟೀಸ್ ನೀಡುವ ಮೂಲಕ, ನೋಟೀಸ್‌ನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆಬರುವಂತೆ ಅದರ ದಿನಾಂಕದಿಂದ ಮೂರು ತಿಂಗಳುಗಳಿಗೆ ಮುಂಚಿತವಲ್ಲದಂತೆ ಹಕ್ಕನ್ನು ಕೊನೆಗೊಳಿಸಬಹುದು.

(2) ಹಿಂದೆ ಹೇಳಿದ ಪರಂತುಕದ ಅಡಿಯಲ್ಲಿ, ಯಾರ ಹಕ್ಕನ್ನು ರಾಜ್ಯ ಸರ್ಕಾರವು ಕೊನೆಗೊಳಿಸಿತೋ ಆ ವ್ಯಕ್ತಿಯು, ಯಾವ ಅವಧಿಗೆ ಹಕ್ಕನ್ನು ಸೃಜಿಸಲಾಯಿತೋ ಆ ಅವಧಿಯಲ್ಲಿ ಉಳಿದಿರುವ ಭಾಗಕ್ಕೆ, ಆ ಭೂಮಿಯಿಂದ ಅಂಥ ವ್ಯಕ್ತಿಯು ಪಡೆಯುವ ಅಂದಾಜು ಮಾಡುವ ನಿವ್ವಳ ಆದಾಯಕ್ಕೆ ಸಮನಾದ ಮೊಬಲಗನ್ನು ಆ ಪ್ರಕರಣದ ಎಲ್ಲ ವಿದ್ಯಮಾನಗಳನ್ನು ಗಮನಿಸಿ ರಾಜ್ಯ ಸರ್ಕಾರದಿಂದ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

## ಅಧ್ಯಾಯ -III
## [1][ಅನುಭೋಗದಾರನೆಂದು ನೋಂದಾಯಿಸುವುದು][1]

1. 2000ದ ಅಧಿನಿಯಮ 22ರ ಮೂಲಕ 7.9.1976 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**10. ಅನುಭೋಗದಾರನೆಂದು ನೋಂದಾಯಿಸಿಕೊಳ್ಳುವ ಕಾರ್ಯವಿಧಾನ.–** [1][(1)][1] 4ನೇ ಪ್ರಕರಣದ ಅಡಿಯಲ್ಲಿ ಅನುಭೋಗದಾರನೆಂದು ನೋಂದಾಯಿಸಿಕೊಳ್ಳಲು ಹಕ್ಕುಳ್ಳ ಪ್ರತಿಯೊಬ್ಬ ವ್ಯಕ್ತಿಯು, ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ ಅಡಿಯಲ್ಲಿ [2][[3][1991ರ ಮಾರ್ಚ್ 31ನೇ ದಿನಾಂಕ][3] ದಂದು ಅಥವಾ ಅದಕ್ಕೂ ಮೊದಲು][2] ರಚಿತವಾದ ನ್ಯಾಯಾಧಿಕರಣಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅಂಥ ಅರ್ಜಿಯನ್ನು, ಸದರಿ ಅಧಿನಿಯಮದ ಅಡಿಯಲ್ಲಿ ಸಲ್ಲಿಸಲಾಗಿದ್ದಿದ್ದರೆ ಹೇಗೋ ಹಾಗೆ ನ್ಯಾಯಾಧಿಕರಣವು ವಿಲೇ ಮಾಡತಕ್ಕದ್ದು.

1. 1986ರ ಅಧಿನಿಯಮ 19ರ ಮೂಲಕ 6.12.1988ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.
2. 1981ರ ಅಧಿನಿಯಮ 23ರ ಮೂಲಕ 8.11.1976ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1991ರ ಅಧಿನಿಯಮ 3ರ ಮೂಲಕ 8.11.1976ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2) x x x ][1]

1. 1986ರ ಅಧಿನಿಯಮ 19ರ ಮೂಲಕ 6.12.1985ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಮತ್ತು 1990ರ ಅಧಿನಿಯಮ 18ರ ಮೂಲಕ 8.10.1990ರಿಂದ ಜಾರಿಗೆ ಬರುವಂತೆ ಕೈಬಿಡಲಾಗಿದೆ.

**11. ಕಂತು ಸಂದಾಯ ಇತ್ಯಾದಿ.–** (1) ಈ ಅಧಿನಿಯಮದ ಅಡಿಯಲ್ಲಿ ಇನಾಮುದಾರನ, ಖಾಯಂ ಗೇಣಿದಾರನ, ಒಬ್ಬ ಗೇಣಿದಾರನ ಅಥವಾ ಅನುಭೋಗದಾರನೆಂದು ನೋಂದಾಯಿಸಿಕೊಳ್ಳಬೇಕಾದ ಇತರ ವ್ಯಕ್ತಿಗಳ ಹಕ್ಕು ಈ ಕೆಳಗೆ ನಿರ್ದಿಷ್ಟಪಡಿಸಿರುವಂತೆ ಕಂತನ್ನು ರಾಜ್ಯಸರ್ಕಾರಕ್ಕೆ ಅವನು ಸಂದಾಯ ಮಾಡುವುದಕ್ಕೆ ಒಳಪಟ್ಟಿರತಕ್ಕದ್ದು:–

(i) ಒಬ್ಬ ಇನಾಮುದಾರ: ನೋಂದಣಿಯಾಗಬೇಕಾದ ಭೂಮಿಗಳ ಭೂ ಕಂದಾಯದ ಆರರಷ್ಟು;

(ii) ಒಬ್ಬ ಖಾಯಂ ಗೇಣಿದಾರ: ನೋಂದಣಿಯಾಗಬೇಕಾದ ಭೂಮಿಯ ಭೂ ಕಂದಾಯದ ಹತ್ತರಷ್ಟು;

(iii) ಇತರ ಗೇಣಿದಾರರು: ನೋಂದಣಿಯಾಗಬೇಕಾದ ಭೂಮಿಯ ಭೂ ಕಂದಾಯದ ಒಂದು ನೂರರಷ್ಟು;

(iv) ಇತರ ವ್ಯಕ್ತಿಗಳು: 4ನೇ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿತವಾದವರು, ನೋಂದಣಿಯಾಗಬೇಕಾದ ಭೂಮಿಯ ಭೂ ಕಂದಾಯದ ಒಂದುನೂರರಷ್ಟು.

(2) ಜಿಲ್ಲಾಧಿಕಾರಿಯ ಪೂರ್ವಾನುಮೋದನೆಯ ಹೊರತು ಮತ್ತು ಈಗಾಗಲೇ ಸಂದಾಯ ಮಾಡಿರುವ ಮೊಬಲಗಿನ ಜೊತೆಗೆ ಸಂಬಂಧಪಟ್ಟ ಭೂಮಿಗಳ ಭೂ ಕಂದಾಯದ ಇಪ್ಪತ್ತರಷ್ಟಕ್ಕೆ ಸಮನಾದ ಮೊಬಲಗನ್ನು ಸಂದಾಯ ಮಾಡದ ಹೊರತು, ನೋಂದಾಯಿಸಲಾದ ಭೂಮಿಯನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡತಕ್ಕದ್ದಲ್ಲವೆಂಬ ಅಥವಾ ವಿಭಜಿಸತಕ್ಕದ್ದಲ್ಲವೆಂಬ ಹೆಚ್ಚಿನ ಷರತ್ತಿಗೆ ಸಹ ಸದರಿ ಹಕ್ಕು ಒಳಪಟ್ಟಿರತಕ್ಕದ್ದು.

## ಅಧ್ಯಾಯ IV
## ವೈಯಕ್ತಿಕ ಇನಾಮುಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಮೊತ್ತವನ್ನು ನಿರ್ಧರಿಸುವುದು

**12. ಸಂದಾಯ ಮಾಡಬೇಕಾದ ಮೊತ್ತವನ್ನು ನಿರ್ಧರಿಸುವ ಬಗೆ.–** (1) ವೈಯಕ್ತಿಕ ಇನಾಮಿನ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಮೊತ್ತವನ್ನು, ಈ ಅಧ್ಯಾಯದ ಉಪಬಂಧಗಳ ಅನುಸಾರವಾಗಿ ನಿರ್ಧರಿಸತಕ್ಕದ್ದು.

(2) ಇನಾಮಿಗೆ ಇಡಿಯಾಗಿ ಮೊತ್ತವನ್ನು ನಿರ್ಧರಿಸಬೇಕೇ ಹೊರತು ಅದರಲ್ಲಿನ ಪ್ರತಿ ಹಿತಾಸಕ್ತಿಗಳಿಗೆ ಪ್ರತ್ಯೇಕವಾಗಿ ನಿರ್ಧರಿಸತಕ್ಕದ್ದಲ್ಲ.

**13. ಸಂದಾಯ ಮಾಡಬೇಕಾದ ಮೊತ್ತ.–** (1) ಈ ಅಧಿನಿಯಮದ ಅಡಿಯಲ್ಲಿ ರಾಜ್ಯಸರ್ಕಾರದಲ್ಲಿ ನಿಹಿತವಾಗಿರುವ ಧಾರ್ಮಿಕ ಅಥವಾ ಧರ್ಮಾರ್ಥ ಇನಾಮಿಲ್ಲದ ಇತರ ಇನಾಮಿನ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಮೊತ್ತವು, ಈ ಕೆಳಕಂಡವುಗಳ ಒಟ್ಟು ಮೊತ್ತವಾಗಿದೆ. ಎಂದರೆ.–

(i) ಈ ಅಧಿನಿಯಮದ 4ನೇ ಪ್ರಕರಣದ ಮೇರೆಗೆ ನೋಂದಾಯಿಸಿಕೊಳ್ಳಲು ಹಕ್ಕುಳ್ಳ ಗೇಣಿದಾರರು ಹೊಂದಿರುವ ಭೂಮಿಗಳಿಂದ ಬರುವ ನಿವ್ವಳ ವಾರ್ಷಿಕ ಆದಾಯದ ಹತ್ತರಷ್ಟಕ್ಕೆ ಸಮನಾದ ಮೊತ್ತ;

(ii) ಗೊತ್ತುಪಡಿಸಿದ ದಿನದಂದು ವಾಸ್ತವವಾಗಿ ಅಸ್ತಿತ್ವದಲ್ಲಿರುವ ಮತ್ತು ಕರ್ನಾಟಕ ಅರಣ್ಯ ಅಧಿನಿಯಮ, 1963ರ (1964ರ ಕರ್ನಾಟಕ ಅಧಿನಿಯಮದ 5) ಅಡಿಯಲ್ಲಿ ರಚಿತವಾದ ನಿಯಮಗಳಿಗನುಸಾರವಾಗಿ, 1973ರ ಸೆಪ್ಟೆಂಬರ್ 11ನೇ ದಿನಾಂಕಕ್ಕೆ ಮೊದಲು ನೋಂದಾಯಿಸಲಾದ ಭೂಮಿಗಳಲ್ಲಿ (ಯಾವ ಭೂಮಿಗಳ ಸಂದರ್ಭದಲ್ಲಿ ಇನಾಮುದಾರನು ಅನುಭೋಗದಾರನಾಗಿ ನೋಂದಾಯಿಸಿಕೊಂಡಿರುವನೋ ಆ ಭೂಮಿಗಳ ಹೊರತು) ಇರುವಂಥ ಗಂಧದ ಮರಗಳಿಗೆ ಅರಣ್ಯ ಇಲಾಖೆಯು ನಿರ್ಧರಿಸಿದ ಮೌಲ್ಯ.; ಮತ್ತು

(iii) ಸಣ್ಣ ಅರಣ್ಯೋತ್ಪನ್ನ (ಗಂಧವನ್ನು ಹೊರತುಪಡಿಸಿ)ದಿಂದ ಬರುವ ಆದಾಯದ ಸಂಬಂಧದಲ್ಲಿ ಈ ಕೆಳಗೆ ನಿರ್ದಿಷ್ಟಪಡಿಸಿದ ಮೊತ್ತ, ಎಂದರೆ:–

| | | ರೂ. |
|---|---|---|
| (ಎ) | ಮುರಾರಿಪುರ ಗ್ರಾಮಕ್ಕೆ ಸಂಬಂಧಿಸಿದಂತೆ | 800 |
| (ಬಿ) | ಎಮ್ಮೆಹಟ್ಟಿ ಗ್ರಾಮಕ್ಕೆ ಸಂಬಂಧಿಸಿದಂತೆ | 1,000 |
| (ಸಿ) | ವಿಠ್ಠಲ ನಗರ ಗ್ರಾಮಕ್ಕೆ ಸಂಬಂಧಿಸಿದಂತೆ | 1,500 |
| (ಡಿ) | ಅನುಸೂಚಿ Iರ ಕ್ರಮಸಂಖ್ಯೆ 4, 5, 6, 7, 8, 10, 11,13, 14, 19,20 ಮತ್ತು 23ರಲ್ಲಿ ಉಲ್ಲೇಖಿಸಿರುವ ಇತರ ಗ್ರಾಮಗಳ ಸಂದರ್ಭದಲ್ಲಿ | ಇಲ್ಲ |

(2) (1)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ, ನಿವ್ವಳ ವಾರ್ಷಿಕ ಆದಾಯವನ್ನು,-

(i) ಖಾಯಂ ಗೇಣಿದಾರರು ಹೊಂದಿರುವ ಭೂಮಿಗಳ ಸಂಬಂಧದಲ್ಲಿ, ನಿಯಮಿಸಲಾದ ರೀತಿಯಲ್ಲಿ ನಿರ್ಧರಿಸಲಾದಂತೆ ರಾಜ್ಯಸರ್ಕಾರಕ್ಕೆ ಇನಾಮುದಾರನು ಸಂದಾಯ ಮಾಡಿದ ಭೂ ಕಂದಾಯದ, ಜೋಡಿಯ, ಜೋಡಿ ಕಂದಾಯದ ಅಥವಾ ಪೇಷ್‌ಖುಷ್ ದಾಮಾಷಾ ಪ್ರಮಾಣವನ್ನು ಅಂಥ ಭೂಮಿಗಳ ಭೂ ಕಂದಾಯದಿಂದ ಕಳೆದ ಬಳಿಕ ಉಳಿಯುವ ಭೂ ಕಂದಾಯವೆಂದು;

(ii) ಇತರ ಗೇಣಿದಾರರು ಹೊಂದಿರುವ ಭೂಮಿಗಳ ಸಂಬಂಧದಲ್ಲಿ, ನಿಯಮಿಸಲಾದ ರೀತಿಯಲ್ಲಿ ನಿರ್ಧರಿಸಲಾದಂತೆ ರಾಜ್ಯಸರ್ಕಾರಕ್ಕೆ ಇನಾಮುದಾರನು ಸಂದಾಯ ಮಾಡಿರುವ ಭೂ ಕಂದಾಯದ, ಜೋಡಿಯ, ಜೋಡಿ ಕಂದಾಯದ ಅಥವಾ ಪೇಷ್‌ಖುಷ್‌ನ ದಾಮಾಷಾ ಪ್ರಮಾಣವನ್ನು ಅಂಥ ಭೂಮಿಗಳ ಭೂ ಕಂದಾಯದ ಹತ್ತರಷ್ಟು ಮೊತ್ತದಿಂದ ಕಳೆದ ಬಳಿಕ ಉಳಿಯುವ ಭೂ ಕಂದಾಯವೆಂದು

– ಭಾವಿಸತಕ್ಕದ್ದು.

**14. ಮೊಬಲಗಿನ ಸಂದಾಯ.–** (1) ಗೊತ್ತುಪಡಿಸಿದ ದಿನಾಂಕದಿಂದ ಮೊಬಲಗು ಬಾಕಿ ಇರುವಂಥದ್ದಾಗಿರತಕ್ಕದ್ದು ಮತ್ತು ಗೊತ್ತುಪಡಿಸಿದ ದಿನಾಂಕದಿಂದ ಸಂದಾಯದ ದಿನಾಂಕದವರೆಗೆ ವರ್ಷಕ್ಕೆ ಶೇ. ಎರಡು ಮತ್ತು ನಾಲ್ಕನೆಯ ಮೂರರಷ್ಟು ದರದ ಬಡ್ಡಿಯನ್ನು ಅದು ಒಳಗೊಂಡಿರತಕ್ಕದ್ದು.

(2) ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊಬಲಗನ್ನು ಈ ಬಗ್ಗೆ ರಚಿತವಾಗಿರುವ ನಿಯಮಗಳಿಗನುಸಾರವಾಗಿ ಹಾಗೂ ಈ ಕೆಳಕಂಡ ವಿಧಾನಗಳ ಪೈಕಿ ಒಂದು ಅಥವಾ ಅದಕ್ಕೂ ಹೆಚ್ಚಿನ ವಿಧಾನಗಳಲ್ಲಿ ಸಂದಾಯ ಮಾಡಬಹುದು, ಎಂದರೆ.–

(i) ನಗದು ರೂಪದಲ್ಲಿ ಪೂರ್ಣವಾಗಿ ಅಥವಾ ಹತ್ತಕ್ಕೆ ಮೀರದ ವಾರ್ಷಿಕ ಕಂತುಗಳಲ್ಲಿ;

(ii) (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಬಡ್ಡಿಯನ್ನು ಹೊಂದಿರುವ ವರ್ಗಾಯಿಸಬಹುದಾದ ಅಥವಾ ವರ್ಗಾಯಿಸಲಾಗದ ಮತ್ತು ಹತ್ತು ವರ್ಷಗಳಿಗೆ ಮೀರದಂತೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ವಾಯಿದೆ ತುಂಬುವ ಖಾತರಿ ಮುಖಬೆಲೆಯುಳ್ಳ ಬಾಂಡುಗಳಲ್ಲಿ;

ಆದರೆ, ಈ ಖಂಡದ ಅಡಿಯಲ್ಲಿ ನೀಡಿದ ಬಾಂಡುಗಳ ಅಡಿಯಲ್ಲಿ ಸಂದಾಯವಾಗಬೇಕಾದ ಮೊಬಲಗನ್ನು, ನಿಯಮಿಸಬಹುದಾದಂಥ ಹತ್ತು ಕಂತುಗಳಿಗೆ ಮೀರದಂತೆ ಮರುಸಂದಾಯ ಮಾಡಬಹುದು.

**15. ಮಧ್ಯಕಾಲೀನ ಸಂದಾಯ.–** (1) ನಿಹಿತವಾದ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ಮೊಬಲಗನ್ನು ಇನಾಮುದಾರನಿಗೆ ಸಂದಾಯ ಮಾಡದಿದ್ದಲ್ಲಿ, ರಾಜ್ಯಸರ್ಕಾರವು, ಭದ್ರತೆಯ ಮರುಸಂದಾಯದ ಅಥವಾ ಅನ್ಯಥಾ ಮತ್ತು ನಿಯಮಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಸಂದಾಯ ಮಾಡಬೇಕಾದ ಅಂದಾಜು ಮೊಬಲಗಿನ ಐದನೇ ಒಂದು ಅಂಶಕ್ಕೆ ಸಮನಾಗುವ ಮಧ್ಯಕಾಲೀನ ಮೊಬಲಗನ್ನು ಪ್ರತಿಯೊಬ್ಬ ಅಂಥ ಇನಾಮುದಾರನಿಗೆ ಸಂದಾಯ ಮಾಡುವಂತೆ ನಿರ್ದೇಶಿಸಬಹುದು,

(2) 14ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರದ ಬಡ್ಡಿಯನ್ನು ಸಂದಾಯವಾಗಬೇಕಾದ ಅಂದಾಜು ಮೊಬಲಗಿನ ಮೇಲೆ ಅಥವಾ (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಧ್ಯಕಾಲೀನ ಸಂದಾಯವನ್ನು ಮುರಿದುಕೊಂಡ ಅನಂತರ ಸಂದಾಯವಾಗಬೇಕಾದ ಅಂದಾಜು ಮೊಬಲಗಿನ ಶಿಲ್ಕಿನ ಮೇಲೆ 16ನೇ ಪ್ರಕರಣದ ಅಡಿಯಲ್ಲಿ ಸಂದಾಯವಾಗಬೇಕಾದ ಮೊತ್ತವನ್ನು ನಿರ್ಧರಿಸುವವರೆಗೆ,–

(ಎ) ಅಂಥ ಇನಾಮುದಾರನ ಹೊರತು ಆ ಮೊಬಲಗಿನ ಹಿತಾಸಕ್ತಿಯುಳ್ಳ ಇತರ ಯಾರೇ ವ್ಯಕ್ತಿಗಳು ಇರದಿದ್ದರೆ, ಅಂಥ ಇನಾಮುದಾರನಿಗೆ;

(ಬಿ) ಇನಾಮುದಾರರ ಹೊರತು 18ನೇ ಪ್ರಕರಣದ ಅಡಿಯಲ್ಲಿ ಹಕ್ಕು ಸಾಧಿಸಿರುವ, ಮೊಬಲಗಿನಲ್ಲಿ ಹಿತಾಸಕ್ತಿಯುಳ್ಳ ಇತರ ವ್ಯಕ್ತಿಗಳು ಇದ್ದಲ್ಲಿ, ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ, ಮತ್ತು ಆ ಮೊತ್ತದಲ್ಲಿ ಹಿತಾಸಕ್ತಿಯಿರುವ ಎಲ್ಲ ವ್ಯಕ್ತಿಗಳು ಲಿಖಿತ ಒಪ್ಪಂದದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಾಮಾಷಾ ಪ್ರಮಾಣದಲ್ಲಿ

– ಪ್ರತಿವರ್ಷ ಸಂದಾಯ ಮಾಡಬಹುದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ಸಂದಾಯವಾಗಬೇಕಾದ ಮಧ್ಯಕಾಲೀನ ಮೊಬಲಗನ್ನು ಮತ್ತು (2)ನೇ ಉಪ-ಪ್ರಕರಣದ ಅಡಿಯಲ್ಲಿ ಸಂದಾಯವಾಗಬೇಕಾದ ಬಡ್ಡಿಯನ್ನು ನಿಯಮಿಸಿದ ರೀತಿಯಲ್ಲಿ ಸಂದಾಯ ಮಾಡಬಹುದು.

**16. ಸಂದಾಯವಾಗಬೇಕಾದ ಒಟ್ಟು ಮೊಬಲಗನ್ನು ಜಿಲ್ಲಾಧಿಕಾರಿಯು ನಿರ್ಧರಿಸುವುದು.–** (1) ಜಿಲ್ಲಾಧಿಕಾರಿಯು, ಸಂದಾಯವಾಗಬೇಕಾದ ಮೊಬಲಗಿಗೆ ಸಂಬಂಧಿಸಿದಂತೆ ಅರ್ಜಿದಾರನಿಗೆ ತನ್ನ ಮನವಿಯನ್ನು ಸಲ್ಲಿಸಲು ಸೂಕ್ತ ಅವಕಾಶವನ್ನು

ನೀಡಿದ ನಂತರ, ಇನಾಮಿಗೆ ಅನ್ವಯವಾಗಬಹುದಾದಂಥ ಹಿಂದೆ ಹೇಳಿದ ಉಪಬಂಧಗಳಿಗೆ ಅನುಸಾರವಾಗಿ, ಇನಾಮಿನ ಸಂಬಂಧದಲ್ಲಿ ಸಂದಾಯವಾಗಬೇಕಾದ ಒಟ್ಟು ಮೊಬಲಗನ್ನು ನಿರ್ಧರಿಸತಕ್ಕದ್ದು.

(2) ಯಾರೇ ಇನಾಮುದಾರ ಅಥವಾ ಹಿತಾಸಕ್ತಿಯುಳ್ಳ ಇತರ ವ್ಯಕ್ತಿಯು, ನಿಯಮಿಸಬಹುದಾದಂಥ ಕಾಲದೊಳಗೆ ಅಥವಾ ಜಿಲ್ಲಾಧಿಕಾರಿಯು ತನ್ನ ವಿವೇಚನೆಯಂತೆ ಅವಕಾಶಕೊಡಬಹುದಾದಂಥ ಇನ್ನೂ ಹೆಚ್ಚಿನ ಕಾಲದೊಳಗೆ ಸಂದಾಯವಾಗಬೇಕಾದ ಒಟ್ಟು ಮೊಬಲಗನ್ನು ನಿರ್ಧರಿಸಲು ಆತನು ಉದ್ದೇಶಿಸಿರುವ ಆ ಆಧಾರಾಂಶಗಳ ಒಂದು ಪ್ರತಿಗಾಗಿ ಜಿಲ್ಲಾಧಿಕಾರಿಗೆ ಲಿಖಿತ ರೂಪದಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

(3) ಅಂಥ ಅರ್ಜಿಯು ತಲುಪಿದ ಮೇಲೆ, ಮೇಲೆ ಹೇಳಿದ ಆಧಾರಾಂಶಗಳನ್ನು ಜಿಲ್ಲಾಧಿಕಾರಿಯು ಅರ್ಜಿದಾರನಿಗೆ ಒದಗಿಸತಕ್ಕದ್ದು.

(4) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶದ ಪ್ರತಿಯನ್ನು, (2)ನೇ ಉಪ-ಪ್ರಕರಣದ ಅಡಿಯಲ್ಲಿ ಸಂಬಂಧಪಟ್ಟ ಪ್ರತಿಯೊಬ್ಬ ಇನಾಮುದಾರನಿಗೆ ಮತ್ತು ಪ್ರತಿಯೊಬ್ಬ ಅರ್ಜಿದಾರನಿಗೆ ಸಹ ಕಳುಹಿಸತಕ್ಕದ್ದು.

**17. ಮೊಬಲಗಿನಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ನೋಟೀಸ್ ನೀಡುವುದು.-** (1) ಗೊತ್ತುಪಡಿಸಿದ ದಿನಾಂಕದ ತರುವಾಯ, ಆದಷ್ಟು ಬೇಗನೆ ಜಿಲ್ಲಾಧಿಕಾರಿಯು,-

(ಎ) ಇನಾಮಿನಲ್ಲಿ ಅಥವಾ ಅದರ ಆಸುಪಾಸಿನಲ್ಲಿ ಅನುಕೂಲಕರ ಸ್ಥಳದಲ್ಲಿ 1ನೇ ಪ್ರಕರಣದ (4)ನೇ ಉಪ-ಪ್ರಕರಣದ ಅಡಿಯಲ್ಲಿನ ಅಧಿಸೂಚನೆಯ ಪ್ರತಿಗಳನ್ನು ಪ್ರಕಟಿಸತಕ್ಕದ್ದು;

(ಬಿ) ಇನಾಮುದಾರನನ್ನು ಒಂದು ಪಾಲಿನ ಮೂಲಕವಾಗಲಿ ಅಥವಾ ಜೀವನಾಂಶದ ರೂಪದಲ್ಲಾಗಲಿ ಅಥವಾ ಇತರ ರೀತಿಯಲ್ಲಾಗಲಿ ಅಂಥ ಯಾವುದೇ ಭಾಗಕ್ಕೆ ಹಕ್ಕು ಸಾಧಿಸುವ ಅವನ ಕುಟುಂಬದ ಸದಸ್ಯರನ್ನು ಮತ್ತು 4ನೇ ಅಥವಾ 6ನೇ ಪ್ರಕರಣದ ಅಡಿಯಲ್ಲಿ ಇನಾಮುದಾರನಲ್ಲಿ ನಿಹಿತವಾಗಿರುವ ಭೂಮಿಗಳನ್ನು ಮತ್ತು ಕಟ್ಟಡಗಳನ್ನು ಹೊರತುಪಡಿಸಿ, ಇನಾಮನ್ನು ಅಥವಾ ಅದರ ಯಾವುದೇ ಭಾಗವನ್ನು ಯಾವ ಲೇಣಿದಾರರ ಋಣಗಳಿಗೆ ಅಡಮಾನದ ಮೂಲಕ ಅಥವಾ ಅವುಗಳ ಮೇಲಿನ ಋಣಭಾರದ ಮೂಲಕ ಭದ್ರತೆಯೊದಗಿಸಲಾಗಿದೆಯೋ ಆ ಲೇಣಿದಾರರನ್ನು ಒಳಗೊಂಡು, ಮೊಬಲಗಿನಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಹಿತಾಸಕ್ತಿಯುಳ್ಳ ಎಲ್ಲ ವ್ಯಕ್ತಿಗಳ ಹಕ್ಕು ಸಾಧನೆಗಳನ್ನು ಅಂಥ ಹಕ್ಕು ಸಾಧನೆಗಳ ಸ್ವರೂಪ ಮತ್ತು ವಿವರಗಳೊಂದಿಗೆ, ಅವನಿಗೆ ಖುದ್ದಾಗಿ ಅಥವಾ ಏಜೆಂಟನ ಮೂಲಕ ಆ ನೋಟೀಸಿನಲ್ಲಿ ನಮೂದಿಸಿರುವ ಕಾಲದಲ್ಲಿ ಮತ್ತು ಸ್ಥಳದಲ್ಲಿ, ಆದರೆ ಆ ನೋಟೀಸಿನ ಪ್ರಕಟಣೆಯ ದಿನಾಂಕದಿಂದ ಅರವತ್ತು ದಿನಗಳಿಗೆ ಮುಂಚಿತವಲ್ಲದಂಥ ಕಾಲದಲ್ಲಿ, ತನಗೆ ಸಲ್ಲಿಸಬೇಕೆಂದು ಕೋರಿ, ಇನಾಮಿನಲ್ಲಿ ಅಥವಾ ಅದರ ಸಮೀಪದ ಅನುಕೂಲಕರವಾದ ಸ್ಥಳದಲ್ಲಿ ಸಾರ್ವಜನಿಕ ನೋಟೀಸನ್ನು ಕೊಡುವಂತೆ ಮಾಡತಕ್ಕದ್ದು. ಅಂಥ ನೋಟೀಸನ್ನು ರಾಜ್ಯಪತ್ರದಲ್ಲೂ ಸಹ ಪ್ರಕಟಿಸತಕ್ಕದ್ದು.

(2) ಸಂದಾಯವಾಗಬೇಕಾದ ಮೊಬಲಗಿನ ಬಗ್ಗೆ ಜಿಲ್ಲಾಧಿಕಾರಿಗೆ ಮೇಲೆ ಹೇಳಿದ ಕಾಲದೊಳಗೆ ಯಾವುದೇ ಹಕ್ಕು ಸಾಧನೆ ಮಾಡದಿರುವಲ್ಲಿ, ಆ ಹಕ್ಕಿನ ಜಾರಿಗೊಳಿಸುವಿಕೆಯು ನಿಂತು ಹೋಗುತ್ತದೆ. ಆದಾಗ್ಯೂ ಜಿಲ್ಲಾಧಿಕಾರಿಯು ಸಾಕಷ್ಟು ಕಾರಣಗಳಿಗಾಗಿ ಮೇಲೆ ಹೇಳಿದ ಅವಧಿ ಮೀರಿದ ನಂತರವೂ ಹಕ್ಕು ಸಾಧಿಸಲು ಅನುಮತಿ ಕೊಡಬಹುದು.

**18. ಜಿಲ್ಲಾಧಿಕಾರಿಯಿಂದ ಮೊತ್ತದ ಹಂಚಿಕೆ.-** ಜಿಲ್ಲಾಧಿಕಾರಿಯು, 17ನೇ ಪ್ರಕರಣದ ಅಡಿಯಲ್ಲಿ ಹಕ್ಕು ಸಾಧಿಸುವ ಎಲ್ಲ ವ್ಯಕ್ತಿಗಳಿಗೆ ಮತ್ತು ಹಿತಾಸಕ್ತಿಯುಳ್ಳವರೆಂದು ತಾನು ಪರಿಗಣಿಸುವ ಯಾರೇ ಇತರರಿಗೆ ನೋಟೀಸ್ ನೀಡಿದ ನಂತರ, ಅವನು ಸ್ವೀಕರಿಸುವ ಹಕ್ಕುಸಾಧನೆಗಳ ಸಿಂಧುತ್ವದ ಬಗ್ಗೆ ವಿಚಾರಣೆ ಮಾಡತಕ್ಕದ್ದು ಮತ್ತು ತನ್ನ ಅಭಿಪ್ರಾಯದಲ್ಲಿ ಮೊಬಲಗಿಗೆ ಹಕ್ಕುಳ್ಳ ವ್ಯಕ್ತಿಗಳು ಯಾರೆಂಬುದನ್ನು ಮತ್ತು ಅವರಲ್ಲಿ ಪ್ರತಿಯೊಬ್ಬರು ಎಷ್ಟು ಮೊತ್ತಕ್ಕೆ ಹಕ್ಕುಳ್ಳವರೆಂದು ನಿರ್ಧರಿಸತಕ್ಕದ್ದು.

**19. ಮೊಬಲಗಿನ ಹಂಚಿಕೆಯ ಕಾರ್ಯವಿಧಾನ.-** (1) ಹಾಗೆ ನಿರ್ಧರಿಸುವುದಕ್ಕೆ ಪೂರ್ವಭಾವಿಯಾಗಿ, ಇನಾಮುದಾರನಿಗೆ ಮತ್ತು ಇನಾಮಿನಿಂದ ಮತ್ತು ಅದರ ಆದಾಯದಿಂದ ಜೀವನಾಂಶ ಪಡೆಯಲು ಹಕ್ಕುಳ್ಳ ವ್ಯಕ್ತಿಗಳೂ ಸೇರಿದಂತೆ 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡದ ಅಡಿಯಲ್ಲಿ ಇನಾಮಿನ ಯಾರ ಹಕ್ಕುಗಳು ಅಥವಾ ಹಿತಾಸಕ್ತಿಗಳು ರಾಜ್ಯಸರ್ಕಾರಕ್ಕೆ ಪ್ರಾಪ್ತವಾಗಿವೆಯೋ ಅದರಲ್ಲಿ ನಿಹಿತವಾಗಿವೆಯೋ ಆ ಇತರ ಹಿತಾಸಕ್ತಿಗಳಿಗೆ ಸಾಧ್ಯವಾದಷ್ಟುಮಟ್ಟಿಗೆ ಇನಾಮುದಾರನಿಗೆ ಮತ್ತು ಇನಾಮಿನಲ್ಲಿನ ಅವರ ಅನುಕ್ರಮ ಹಿತಾಸಕ್ತಿಗಳ ಮೌಲ್ಯಕ್ಕೆ ಅನುಸಾರವಾಗಿ, ಜಿಲ್ಲಾಧಿಕಾರಿಯು ಮೊಬಲಗನ್ನು ಹಂಚಿ ಕೊಡತಕ್ಕದ್ದು.

(2) ನಿಯಮಿಸಬಹುದಾದಂಥ ರೀತಿಯಲ್ಲಿ ಹಿತಾಸಕ್ತಿಗಳ ಮೌಲ್ಯವನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**20. ಲೇಣಿದಾರರ ಹಕ್ಕುಸಾಧನೆಗಳು.-** (1) 19ನೇ ಪ್ರಕರಣದಲ್ಲಿ ಉಲ್ಲೇಖಿಸಿದ ವ್ಯಕ್ತಿಗಳಿಗೆ ಮೊಬಲಗಿನ ಹಂಚಿಕೆ ಮಾಡಿದ ತರುವಾಯ ಅಥವಾ ಹಂಚಿಕೆಯಾಗುವವರೆಗೆ ಹಾಗೆ ಮಾಡುವುದು ಹೆಚ್ಚು ಅನುಕೂಲಕರವಾಗಿದ್ದಲ್ಲಿ, ಜಿಲ್ಲಾಧಿಕಾರಿಯು 18ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಭದ್ರತೆ ಪಡೆದ ಲೇಣಿದಾರರ ಅರ್ಜಿಗಳನ್ನು ಪರಿಶೀಲನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ಲೇಣಿದಾರನು ಎಷ್ಟು ಮೊಬಲಗಿಗೆ ಹಕ್ಕುಳ್ಳವನಾಗಿರುವನೆಂಬುದನ್ನು ಮತ್ತು ಅಂಥ ಮೊಬಲಗನ್ನು ಯಾವ ವ್ಯಕ್ತಿ ಅಥವಾ ವ್ಯಕ್ತಿಗಳ ಪಾಲಿನಿಂದ ಅಥವಾ ಪಾಲುಗಳಿಂದ ಸಂದಾಯ ಮಾಡಬೇಕೆಂಬುದನ್ನು ನಿರ್ಧರಿಸತಕ್ಕದ್ದು:

ಆದರೆ, ಭೂಕಂದಾಯದಂತೆ ಅಥವಾ ಇತರ ರೀತಿಯಲ್ಲಿ ರಾಜ್ಯಸರ್ಕಾರಕ್ಕೆ ಬರಬೇಕಾಗಿರುವ ಯಾವುದೇ ಮೊಬಲಗನ್ನು, ಸಂದಾಯವಾಗಬೇಕಾದ ಮೊತ್ತದಿಂದ ಮುರಿದುಕೊಳ್ಳತಕ್ಕದ್ದು.

(2) ಯಾವುದೇ ಅಡಮಾನ ಅಥವಾ ಋಣಭಾರವನ್ನು ಹೊಂದಿರುವ ಕಾರಣದಿಂದಾಗಿ, ಭದ್ರತೆ ಪಡೆದ ಲೇಣಿದಾರರಿಗೆ ರಾಜ್ಯಸರ್ಕಾರವು ಸಂದಾಯ ಮಾಡಬೇಕಾದ ಮೊಬಲಗು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ

ಕಾನೂನಿನಲ್ಲಿ ಏನೇ ಇದ್ದರೂ, ಇನಾಮಿಗೆ ಅಥವಾ ಅದರ ಭಾಗಕ್ಕೆ ಸಂಬಂಧಿಸಿ ಸಂದಾಯವಾಗಬೇಕಾದ ಮೊಬಲಗನ್ನು ಮೀರತಕ್ಕದ್ದಲ್ಲ.

**21. ಮೊಬಲಗಿನಲ್ಲಿ ಹಿತಾಸಕ್ತಿಯ ಪ್ರಾಪ್ತಿ.–** ಮೊಬಲಗಿನ ಯಾವುದೇ ಭಾಗದ ಸಂದಾಯವನ್ನು ಪಡೆಯಲು ಹಕ್ಕುಳ್ಳ ಯಾರೇ ವ್ಯಕ್ತಿಯ ಹಿತಾಸಕ್ತಿಯು ಸಂಬಂಧಿಸಿದ ಪಕ್ಷಕಾರರ ಕೃತ್ಯದಿಂದಾಗಲೀ ಅಥವಾ ಕಾನೂನಿನ ಪ್ರವರ್ತನೆಯಿಂದಾಗಲೀ ಯಾರೇ ಇತರ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಪ್ರಾಪ್ತವಾಗಿದೆಯೆಂದು ಆಪಾದಿಸಿರುವಲ್ಲಿ, ಜಿಲ್ಲಾಧಿಕಾರಿಯು ಅಹವಾಲನ್ನು ಹೇಳಿಕೊಳ್ಳಲು ಪಕ್ಷಕಾರನಿಗೆ ಒಂದು ಅವಕಾಶವನ್ನು ನೀಡಿದ ತರುವಾಯ, ಯಾವುದೇ ಹಿತಾಸಕ್ತಿಯು ಪ್ರಾಪ್ತವಾಗಿದೆಯೇ ಎಂಬುದನ್ನು ಮತ್ತು ಹಾಗಿದ್ದರೆ ಯಾರಿಗೆ ಪ್ರಾಪ್ತವಾಗಿದೆಯೆಂಬುದನ್ನು ನಿರ್ಧರಿಸತಕ್ಕದ್ದು.

## ಅಧ್ಯಾಯ –V

## ಧಾರ್ಮಿಕ ಅಥವಾ ಧರ್ಮಾರ್ಥ ಇನಾಮುಗಳ ಸಂಬಂಧದಲ್ಲಿ ಸಂದಾಯವಾಗಬೇಕಾದ ಮೊಬಲಗು

**22. ಸಂದಾಯವಾಗಬೇಕಾದ ಮೊಬಲಗು.–** (1) ಈ ಅಧಿನಿಯಮದ ಅಡಿಯಲ್ಲಿ ರಾಜ್ಯಸರ್ಕಾರದಲ್ಲಿ ನಿಹಿತವಾಗಿರುವ ಈ ಅಧಿನಿಯಮದ IIನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಗ್ರಾಮಗಳಲ್ಲಿರುವ ಧಾರ್ಮಿಕ ಅಥವಾ ಧರ್ಮಾರ್ಥ ಇನಾಮಿನ ಸಂಬಂಧದಲ್ಲಿ, ಧಾರ್ಮಿಕ ಅಥವಾ ಧರ್ಮಾರ್ಥ ಸಂಸ್ಥೆಗಳು ಅಸ್ತಿತ್ವದಲ್ಲಿ ಇರುವವರೆಗೆ, ರಾಜ್ಯಸರ್ಕಾರವು, ಇನಾಮುದಾರನಿಗೆ ಪ್ರತಿವರ್ಷ ಮೂವತ್ತಾರು ಸಾವಿರ ರೂಪಾಯಿಗಳ ಮೊತ್ತವನ್ನು ಸಂದಾಯ ಮಾಡತಕ್ಕದ್ದು.

(2) ರಾಜ್ಯಸರ್ಕಾರದಲ್ಲಿ ನಿಹಿತವಾಗಿರುವ ಇತರ ಧಾರ್ಮಿಕ ಅಥವಾ ಧರ್ಮಾರ್ಥ ಇನಾಮುಗಳ ಸಂಬಂಧದಲ್ಲಿ, ಅಂಥ ಇನಾಮಿನಲ್ಲಿ ಒಳಗೊಂಡಿರುವ ಭೂಮಿಯ ಮೇಲೆ ಸಂದಾಯವಾಗಬೇಕಾದ ಭೂ ಕಂದಾಯದ ಹತ್ತರಷ್ಟಕ್ಕೆ ಸಮನಾದ ಮೊತ್ತವನ್ನು ಪ್ರತಿವರ್ಷ ರಾಜ್ಯಸರ್ಕಾರವು, ಇನಾಮುದಾರನಿಗೆ ಸಂದಾಯ ಮಾಡತಕ್ಕದ್ದು.

**23. ಜಿಲ್ಲಾಧಿಕಾರಿಯು ಮೊಬಲಗನ್ನು ನಿರ್ಧರಿಸುವುದು.–** (1) ಜಿಲ್ಲಾಧಿಕಾರಿಯು, 22ನೇ ಪ್ರಕರಣದ (2)ನೇ ಉಪ–ಪ್ರಕರಣದ ಅಡಿಯಲ್ಲಿ ಇನಾಮುದಾರನಿಗೆ ಸಂದಾಯವಾಗಬೇಕಾದ ಮೊಬಲಗನ್ನು ಆದೇಶದ ಮೂಲಕ ನಿರ್ಧರಿಸತಕ್ಕದ್ದು.

(2) (1)ನೇ ಉಪ–ಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶದ ಪ್ರತಿಯನ್ನು ಸಂಬಂಧಪಟ್ಟ ಇನಾಮುದಾರನಿಗೆ ಒದಗಿಸತಕ್ಕದ್ದು.

## ಅಧ್ಯಾಯ –VI

## ಸಂಕೀರ್ಣ

**24. ವ್ಯಕ್ತಿಯು ಅನುಭೋಗದಾರನೆಂದು ನೋಂದಾಯಿಸಿಕೊಳ್ಳಬಹುದಾದ ಭೂಮಿಯ ವಿಸ್ತೀರ್ಣ.–** 4ನೇ ಪ್ರಕರಣದಲ್ಲಿ ಉಲ್ಲೇಖಿತನಾದ ವ್ಯಕ್ತಿಯು ಯಾವ ಭೂಮಿಯ ಸಂಬಂಧದಲ್ಲಿ ಅನುಭೋಗದಾರನಾಗಿ ನೋಂದಾಯಿಸಿಕೊಳ್ಳಲು ಹಕ್ಕನ್ನು ಹೊಂದಿರುವನೋ, ಆ ಭೂಮಿಯ ವಿಸ್ತೀರ್ಣವು ಅವನು ಹೊಂದಿರುವ ಯಾವುದೇ ಭೂಮಿಯೂ ಸೇರಿ ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ ಅಡಿಯಲ್ಲಿ ನಿಗದಿಪಡಿಸಿರುವ ವಿಸ್ತೀರ್ಣವನ್ನು ಮೀರತಕ್ಕದ್ದಲ್ಲ.

**25. ರಾಜ್ಯ ಸರ್ಕಾರದಲ್ಲಿ ನಿಹಿತವಾಗುವ ಭೂಮಿಗಳ ವಿಲೇವಾರಿ.–** ರಾಜ್ಯಸರ್ಕಾರದಲ್ಲಿ ನಿಹಿತವಾಗುವ ಮತ್ತು ಈ ಅಧಿನಿಯಮದ ಅಡಿಯಲ್ಲಿ ಯಾವ ಭೂಮಿಗೆ ಸಂಬಂಧಿಸಿ ಯಾವ ವ್ಯಕ್ತಿಯು ಅನುಭೋಗದಾರನೆಂದು ನೋಂದಾಯಿಸಿಕೊಳ್ಳಲು ಹಕ್ಕನ್ನು ಹೊಂದಿರುವುದಿಲ್ಲವೋ ಆ ಭೂಮಿಯನ್ನು ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ 77ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ವಿಲೇವಾರಿ ಮಾಡತಕ್ಕದ್ದು:

ಆದರೆ, ಸ್ತ್ರೀಸ್ವತ್ತು ಎಂದು ತಿಳಿದುಬಂದಿರುವ ಯಾವುದೇ ಭೂಮಿಯನ್ನು 1948ಕ್ಕೂ ಮುಂಚೆ ಹನ್ನೆರಡು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯವರೆಗೆ ನಿರಂತರವಾಗಿ ಸಾಗುವಳಿ ಮಾಡಿರುವ ಮತ್ತು ಆ ದಿನಾಂಕದ ತರುವಾಯ ಇನಾಮುದಾರನಿಂದ ಸ್ವಾಧೀನ ತಪ್ಪಿಸಲ್ಪಟ್ಟ ವ್ಯಕ್ತಿಯನ್ನು ಸದರಿ 77ನೇ ಪ್ರಕರಣದ ಉದ್ದೇಶಕ್ಕಾಗಿ, ಹೊರಹಾಕಲ್ಪಟ್ಟ ಗೇಣಿದಾರನೆಂದು ಭಾವಿಸತಕ್ಕದ್ದು.

**26. ವಿಭಾಗಾಧಿಕಾರಿಯಿಂದ ಪುನರೀಕ್ಷಣೆ.–** 16ನೇ ಪ್ರಕರಣದ ಅಥವಾ 23ನೇ ಪ್ರಕರಣದ ಅಡಿಯಲ್ಲಿ ಜಿಲ್ಲಾಧಿಕಾರಿಯು ಹೊರಡಿಸಿದ ಯಾವುದೇ ಆದೇಶದ ದಾಖಲೆಯನ್ನು ವಿಭಾಗಾಧಿಕಾರಿಯು ಯಾವುದೇ ಕಾಲದಲ್ಲಿ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅಂಥ ಆದೇಶವು ರಾಜ್ಯದ ರಾಜಸ್ವದ ಹಿತಾಸಕ್ತಿಗೆ ಪ್ರತಿಕೂಲವಾಗುವಷ್ಟರಮಟ್ಟಿಗೆ ತಪ್ಪಾಗಿದೆಯೆಂದು ಪರಿಗಣಿಸಿದರೆ, ತಾನು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ಅಥವಾ ಮಾಡಿಸಿದ ತರುವಾಯ ಮತ್ತು ಬಾಧಿತ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ, ಸಂದಾಯವಾಗಬೇಕಾದ ಮೊಬಲಗನ್ನು ಕಡಿಮೆ ಮಾಡುವ ಆದೇಶವನ್ನು ಒಳಗೊಂಡು ಅಥವಾ ಜಿಲ್ಲಾಧಿಕಾರಿಯು ಹೊಸ ನಿರ್ಧಾರವನ್ನು ಮಾಡುವಂತೆ ನಿರ್ದೇಶಿಸುವ, ಆ ಪ್ರಕರಣದ ಸಂದರ್ಭ–ಸನ್ನಿವೇಶಗಳನ್ನು ಸಮರ್ಥಿಸುವಂಥ ಆದೇಶವನ್ನು ಹೊರಡಿಸಬಹುದು:

ಆದರೆ,–

(1) 29ನೇ ಪ್ರಕರಣದ ಅಡಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದಲ್ಲಿ; ಅಥವಾ

(2) ಆದೇಶವನ್ನು ಪುನರೀಕ್ಷಿಸಬೇಕೆಂದು ಕೋರಿದ ದಿನಾಂಕದಿಂದ ನಾಲ್ಕು ವರ್ಷಗಳ ಮುಕ್ತಾಯವಾದ ತರುವಾಯ – ಅಂಥ ಯಾವ ಆದೇಶವನ್ನು ಮಾಡತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ ಕಾಲ ಪರಿಮಿತಿಯ ಅವಧಿಯನ್ನು ಲೆಕ್ಕಹಾಕುವಲ್ಲಿ, ಯಾವುದೇ ನ್ಯಾಯಾಲಯದ ಯಾವುದೇ ಆದೇಶದ ಅಥವಾ ನಿರ್ಬಂಧಕಾಜ್ಞೆಯ ಮೂಲಕ ಈ ಪ್ರಕರಣದ ಅಡಿಯಲ್ಲಿನ ಯಾವುದೇ ವ್ಯವಹರಣೆಯನ್ನು ಯಾವ ಅವಧಿಯಲ್ಲಿ ತಡೆಹಿಡಿಯಲಾಗಿತ್ತೋ ಆ ಯಾವುದೇ ಅವಧಿಯನ್ನು ಹೊರತುಪಡಿಸತಕ್ಕದ್ದು.

**27. ವಿಭಾಗಾಧಿಕಾರಿಯಿಂದ ನಿಯಂತ್ರಣ.–** ವಿಭಾಗಾಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯೊಳಗೆ,–

(ಎ) ಎಲ್ಲ ಇನಾಮುಗಳನ್ನು ವಹಿಸಿಕೊಳ್ಳುವುದರ ಮೇಲ್ವಿಚಾರಣೆ ಮಾಡಲು ಮತ್ತು ಅದರ ಆಡಳಿತದ ಬಗ್ಗೆ ಅಗತ್ಯ ವ್ಯವಸ್ಥೆಯನ್ನು ಮಾಡಲು;

(ಬಿ) ಜಿಲ್ಲಾಧಿಕಾರಿಯ ಮಾರ್ಗದರ್ಶನಕ್ಕಾಗಿ ಸೂಚನೆಗಳನ್ನು ನೀಡಲು;

(ಸಿ) ನಿರ್ದಿಷ್ಟ ಪ್ರದೇಶವು ಇನಾಮಿನ ಭಾಗವೇ ಅಥವಾ ಅಲ್ಲವೇ ಎಂಬುದನ್ನು ಘೋಷಿಸುವ ಜಿಲ್ಲಾಧಿಕಾರಿಯ ಯಾವುದೇ ಆದೇಶವನ್ನು ರದ್ದುಗೊಳಿಸಲು ಅಥವಾ ಪುನರೀಕ್ಷಿಸಲು

– ಅಧಿಕಾರವನ್ನು ಹೊಂದಿರತಕ್ಕದ್ದು.

**28. ರಾಜ್ಯ ಸರ್ಕಾರದಿಂದ ಪುನರೀಕ್ಷಣೆ.–** ರಾಜ್ಯಸರ್ಕಾರವು, 27ನೇ ಪ್ರಕರಣದ ಅಡಿಯಲ್ಲಿ ವಿಭಾಗಾಧಿಕಾರಿಯು ಮಾಡಿದ ಯಾವುದೇ ಆದೇಶವನ್ನು ರದ್ದುಗೊಳಿಸಬಹುದು ಅಥವಾ ಪುನರೀಕ್ಷಿಸಬಹುದು.

**29. 8, 16 ಮತ್ತು 24ನೇ ಪ್ರಕರಣಗಳ ಅಡಿಯಲ್ಲಿನ ಆದೇಶದ ಮೇಲೆ ಮೇಲ್ಮನವಿ.–** (1) 8, 16 ಮತ್ತು 24ನೇ ಪ್ರಕರಣಗಳ ಅಡಿಯಲ್ಲಿ ಜಿಲ್ಲಾಧಿಕಾರಿಯ ಯಾವುದೇ ತೀರ್ಮಾನದ ವಿರುದ್ಧ ರಾಜ್ಯಸರ್ಕಾರವು, ತೀರ್ಮಾನದ ದಿನಾಂಕದಿಂದ ಆರು ತಿಂಗಳುಗಳೊಳಗೆ ಮತ್ತು ಅಂಥ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ತೀರ್ಮಾನದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣಕ್ಕೆ ಮೇಲ್ಮನವಿ ಸಲ್ಲಿಸಬಹುದು; ಮೇಲ್ಮನವಿ ನ್ಯಾಯಾಧಿಕರಣದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(2) 6ನೇ ಪ್ರಕರಣದ (2)ನೇ ಉಪ–ಪ್ರಕರಣದ ವ್ಯಾಪ್ತಿಯೊಳಗೆ ಯಾವುದೇ ಕಟ್ಟಡವು ಬರುವುದೇ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದ್ದರೆ, ಅದನ್ನು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣಕ್ಕೆ ಕಳುಹಿಸತಕ್ಕದ್ದು, ಮೇಲ್ಮನವಿ ನ್ಯಾಯಾಧಿಕರಣದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**30. ತಪ್ಪಾಗಿ ಅಥವಾ ಹೆಚ್ಚಾಗಿ ಮಾಡಿದ ಸಂದಾಯಗಳನ್ನು ಭೂ ಕಂದಾಯದ ಬಾಕಿ ಎಂಬಂತೆ ವಸೂಲಿ ಮಾಡುವುದು.–** ಯಾರೇ ವ್ಯಕ್ತಿಗೆ ಮಾಡಿದ ಯಾವುದೇ ಸಂದಾಯವು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಆದೇಶದಿಂದಾಗಿ ಅಥವಾ ಬೇರೆ ರೀತಿಯಲ್ಲಿ ಅವನಿಗೆ ಸಲ್ಲಬೇಕಾದುದು ಆಗಿರಲಿಲ್ಲವೆಂದು ಅಥವಾ ಅವನಿಗೆ ಸಲ್ಲಬೇಕಾಗಿದ್ದ ಮೊಬಲಗಿಗಿಂತ ಹೆಚ್ಚಾಗಿ ಸಂದಾಯವಾಗಿದೆಯೆಂದು ತರುವಾಯ ಕಂಡುಬಂದಲ್ಲಿ ಸಂದರ್ಭಾನುಸಾರ ಅವನಿಗೆ ಸಲ್ಲಬೇಕಾಗಿರಲಿಲ್ಲವೆಂದು ಅಥವಾ ಹೆಚ್ಚಾಗಿ ಸಂದಾಯವಾಗಿದೆಯೆಂದು ಕಂಡುಬಂದ ಮೊಬಲಗನ್ನು ಅಂಥ ವ್ಯಕ್ತಿಗೆ ಸಲ್ಲಬೇಕಾದ ಯಾವುದೇ ಮೊಬಲಗುಗಳಿಂದ ಮುರಿದುಕೊಳ್ಳುವ ಮೂಲಕ ಅನ್ಯಥಾ ಅದನ್ನು ಸರಿಹೊಂದಿಸಲಾಗದಿದ್ದರೆ, ಅದು ಭೂ ಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ವಸೂಲಾಗಬೇಕಾಗಿರತಕ್ಕದ್ದು.

**31. ಜಿಲ್ಲಾಧಿಕಾರಿಯಿಂದ ವಿಚಾರಣೆಗಳು.–** (1) ಜಿಲ್ಲಾಧಿಕಾರಿಯು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಈ ಅಧಿನಿಯಮದ ಅಡಿಯಲ್ಲಿ ತನ್ನ ಪರವಾಗಿ ವಿಚಾರಣೆಗಳನ್ನು ಮಾಡಲು ತನಗೆ ಅಧೀನನಾದ, ತಹಶೀಲುದಾರನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಅಧಿಕಾರಿಯನ್ನು ಅಧಿಕೃತಗೊಳಿಸಬಹುದು:

ಆದರೆ, ಜಿಲ್ಲಾಧಿಕಾರಿಯು, ಯಾರೇ ಅಂಥ ಅಧಿಕಾರಿಯು ಮಾಡಿದ ಯಾವುದೇ ವಿಚಾರಣೆಯ ಸಂಬಂಧದಲ್ಲಿ, ಹೊಸದಾಗಿ ಅಥವಾ ಹೆಚ್ಚಿನ ವಿಚಾರಣೆಯನ್ನು ಮಾಡುವ ಅಗತ್ಯವಿದೆಯೆಂದು ತಾನು ಅಭಿಪ್ರಾಯಪಟ್ಟರೆ, ಹೊಸದಾಗಿ ಅಥವಾ ಹೆಚ್ಚಿನ ವಿಚಾರಣೆಯನ್ನು ಮಾಡುವಂತೆ ನಿರ್ದೇಶಿಸಬಹುದು ಅಥವಾ ಸ್ವತಃ ತಾನೇ ಮಾಡಬಹುದು.

(2) ಜಿಲ್ಲಾಧಿಕಾರಿಯು ಅಥವಾ (1)ನೇ ಉಪ–ಪ್ರಕರಣದ ಅಡಿಯಲ್ಲಿ ಯಾರೇ ಅಧಿಕೃತ ಅಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಪ್ರತಿಯೊಂದು ವಿಚಾರಣೆಯ ಸಂಬಂಧದಲ್ಲಿ ವಿಧ್ಯುಕ್ತ ವಿಚಾರಣೆಗೆ ಸಂಬಂಧಿಸಿದಂತೆ, ಈ ಅಧಿನಿಯಮದ ಉಪಬಂಧಗಳು, ಅಂಥ ವಿಚಾರಣೆಯು ಈ ಅಧಿನಿಯಮದ ಅಡಿಯಲ್ಲಿನ ವಿಧ್ಯುಕ್ತ ವಿಚಾರಣೆಯಾಗಿದ್ದರೆ ಹೇಗೋ ಹಾಗೆ, ಅನ್ವಯವಾಗತಕ್ಕದ್ದು.

**32. ಈ ಅಧಿನಿಯಮದ ಅಡಿಯಲ್ಲಿ ಅರ್ಜಿಗಳು, ಮನವಿಗಳು, ಇತ್ಯಾದಿಗಳ ಮೇಲೆ ಸಂದಾಯ ಮಾಡಬೇಕಾದ ಶುಲ್ಕ.–** ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958 (1958ರ ಕರ್ನಾಟಕ ಅಧಿನಿಯಮ 16) ರಲ್ಲಿ ಏನೇ ಇದ್ದರೂ, ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿತವಾದ ನಿಯಮಗಳ ಅಡಿಯಲ್ಲಿ ಯಾವುದೇ ಅರ್ಜಿಗಾಗಿ, ಮೇಲ್ಮನವಿ ವಿವರಣ ಪತ್ರಕ್ಕಾಗಿ ಅಥವಾ ಮನವಿಗಾಗಿ ಸಂದಾಯ ಮಾಡಬೇಕಾದ ಶುಲ್ಕಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**33. ಕೆಲವು ಸಂದರ್ಭಗಳಲ್ಲಿ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.– (1)** ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ಯಾವುದೇ ನಿಯಮದ ಅಡಿಯಲ್ಲಿ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕ್ರಿಯೆಗಾಗಿ ರಾಜ್ಯಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿತವಾದ ಯಾವುದೇ ನಿಯಮದ ಅಡಿಯಲ್ಲಿ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕ್ರಿಯೆಗೆ ಸಂಬಂಧಿಸಿ, ಈ ಅಧಿನಿಯಮದ ಮೂಲಕ ಅಥವಾ

ಅದರ ಅಡಿಯಲ್ಲಿ ವಿಧಿಸಿದ ಕರ್ತವ್ಯಗಳನ್ನು ನಿರ್ವಹಿಸುವಾಗ ಅಥವಾ ಕಾರ್ಯಗಳನ್ನು ನೆರವೇರಿಸುವಾಗ ಸದ್ಭಾವನೆಯಿಂದ ಆ ಕ್ರಿಯೆಯನ್ನು ಮಾಡಲಾಗಿದ್ದರೆ, ರಾಜ್ಯ ಸರ್ಕಾರದ ಯಾವ ಅಧಿಕಾರಿಯೂ ಅಥವಾ ನೌಕರನೂ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗಳಿಗೆ ಗುರಿಯಾಗತಕ್ಕದ್ದಲ್ಲ.

(3) ರಾಜ್ಯಸರ್ಕಾರದ ಯಾರೇ ಅಧಿಕಾರಿಯು ಅಥವಾ ನೌಕರನು, ಯಾವುದೇ ಅಂಥ ಕರ್ತವ್ಯ ಅಥವಾ ಕಾರ್ಯದ ನೆಪದಲ್ಲಿ ಅಥವಾ ಅದನ್ನು ಮೀರಿ ಮಾಡಿದ ಯಾವುದೇ ಕ್ರಿಯೆಯ ಸಂಬಂಧದಲ್ಲಿ, ರಾಜ್ಯಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಅಂಥ ಅಧಿಕಾರಿಯ ಅಥವಾ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ ಮತ್ತು ಯಾವ ಕ್ರಿಯೆಯ ಬಗ್ಗೆ ದೂರು ನೀಡಲಾಗಿದೆಯೋ ಆ ದಿನಾಂಕದಿಂದ ಒಂದು ವರ್ಷವು ಮುಕ್ತಾಯವಾದ ತರುವಾಯ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಸಿವಿಲ್ ನ್ಯಾಯಾಲಯವು.–

(i) ಈ ಅಧಿನಿಯಮದ 18, 16 ಮತ್ತು 23ನೇ ಪ್ರಕರಣಗಳ ಅಡಿಯಲ್ಲಿ ಜಿಲ್ಲಾಧಿಕಾರಿಯು ತೀರ್ಮಾನಿಸಬೇಕಾದ ಯಾವುದೇ ವಿಷಯಕ್ಕೆ ಸಂಬಂಧಿಸಿದ; ಅಥವಾ

(ii) 26ನೇ ಪ್ರಕರಣದ ಅಡಿಯಲ್ಲಿ ವಿಭಾಗಾಧಿಕಾರಿಯು ಮಾಡಿದ ಆದೇಶಕ್ಕೆ ಸಂಬಂಧಿಸಿದ ಮತ್ತು ಮೇಲ್ಮನವಿ ಮಾಡುವ ಹಕ್ಕು 29 ಅಥವಾ 30ನೇ ಪ್ರಕರಣಗಳ ಮೂಲಕ ಯಾವುದರ ಬಗ್ಗೆ ದತ್ತವಾಗಿದೆಯೋ ಅದಕ್ಕೆ ಸಂಬಂಧಿಸಿದ

– ಯಾವುದೇ ಅರ್ಜಿಯನ್ನು ಅಥವಾ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ.

**34. ನಿಯಮ ರಚನಾಧಿಕಾರ.**– (1) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ರಾಜ್ಯಸರ್ಕಾರವು ಅಧಿಸೂಚನೆ ಮೂಲಕ ಮತ್ತು ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು, ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಕೆಳಕಂಡ ವಿಷಯಗಳ ಬಗ್ಗೆ ಅವಕಾಶ ಕಲ್ಪಿಸಬಹುದು,–

(ಎ) ಈ ಅಧಿನಿಯಮದ ಮೂಲಕ ನಿಯಮಿಸಲಾಗುವ ನಿರ್ದಿಷ್ಟವಾಗಿ ಅಗತ್ಯಪಡಿಸಲಾದ ಅಥವಾ ಅನುಮತಿಸಲಾದ ಎಲ್ಲ ವಿಷಯಗಳು;

(ಬಿ) ಜಿಲ್ಲಾಧಿಕಾರಿ ಮತ್ತು ಈ ಅಧಿನಿಯಮದ ಅಡಿಯಲ್ಲಿ ನೇಮಕಗೊಂಡ ಅಥವಾ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಅಧಿಕಾರಿಗಳು ಅಥವಾ ಪ್ರಾಧಿಕಾರಿಗಳು ಅನುಸರಿಸಬೇಕಾದ ಕಾರ್ಯವಿಧಾನ;

(ಸಿ) ಇದರಲ್ಲಿ ಆ ಬಗ್ಗೆ ಯಾವ ನಿರ್ದಿಷ್ಟ ಉಪಬಂಧಗಳನ್ನು ಕಲ್ಪಿಸಿರದ ಸಂದರ್ಭಗಳಲ್ಲಿ ಈ ಅಧಿನಿಯಮದ ಅಡಿಯಲ್ಲಿ ಅರ್ಜಿಗಳನ್ನು ಮತ್ತು ಮೇಲ್ಮನವಿಗಳನ್ನು ಸಲ್ಲಿಸಬೇಕಾದ ಕಾಲ;

(ಡಿ) ಈ ಅಧಿನಿಯಮದ ಅಡಿಯಲ್ಲಿನ ಅರ್ಜಿಗಳಿಗೆ, ಮೇಲ್ಮನವಿಗಳಿಗೆ ಮತ್ತು ವ್ಯವಹರಣೆಗಳಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ಮತ್ತು ಪರಿಮಿತಿ ಅಧಿನಿಯಮ, 1963ರ ಉಪಬಂಧಗಳನ್ನು ಅನ್ವಯಿಸುವುದು.

**35. ದಂಡನೆಗಳು.**– (1) ಯಾರೇ ವ್ಯಕ್ತಿಯು, –

(ಎ) ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಯಾವುದೇ ಕಾನೂನುಬದ್ಧ ಆದೇಶವನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ತಪ್ಪಿದರೆ ಅಥವಾ ನಿರ್ಲಕ್ಷಿಸಿದರೆ ಅಥವಾ ಅಂಥ ಯಾವುದೇ ಆದೇಶವನ್ನು ಉಲ್ಲಂಘಿಸಿದರೆ; ಅಥವಾ

(ಬಿ) ಈ ಅಧಿನಿಯಮದ ಅಡಿಯಲ್ಲಿ ರಾಜ್ಯಸರ್ಕಾರದಲ್ಲಿ ನಿಹಿತವಾಗಿರುವ ಯಾವುದೇ ಸ್ವತ್ತನ್ನು ವಹಿಸಿಕೊಳ್ಳುವುದಕ್ಕೆ ಅಥವಾ ಅದರ ಸ್ವಾಧೀನವನ್ನು ಪಡೆದುಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗೆ ಪ್ರತಿರೋಧವನ್ನು ವ್ಯಕ್ತಪಡಿಸಿದರೆ ಅಥವಾ ಅಡ್ಡಿಯುಂಟು ಮಾಡಿದರೆ; ಅಥವಾ

(ಸಿ) ತಾನು ಸುಳ್ಳೆಂದು ತಿಳಿದ ಅಥವಾ ಸುಳ್ಳೆಂದು ನಂಬಲು ಕಾರಣವಿರುವ ಅಥವಾ ನಿಜವೆಂದು ತಾನು ನಂಬದಿರುವ ಮಾಹಿತಿಯನ್ನು ಒದಗಿಸಿದರೆ

– ಆತನು ಅಪರಾಧಿಯೆಂದು ದಂಡಾಧಿಕಾರಿಯಿಂದ ನಿರ್ಣೀತನಾದ ಮೇಲೆ ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದ ಸೆರೆಮನೆವಾಸದಿಂದ ಅಥವಾ ಎರಡು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಆತನು ದಂಡಿತನಾಗತಕ್ಕದ್ದು.

(2) (1)ನೇ ಉಪ–ಪ್ರಕರಣದ ಅಡಿಯಲ್ಲಿ, ಜಿಲ್ಲಾಧಿಕಾರಿಯ ಪೂರ್ವ ಮಂಜೂರಾತಿ ಪಡೆದ ಹೊರತು ಯಾವುದೇ ಪ್ರಾಸಿಕ್ಯೂಷನನ್ನು ಹೂಡತಕ್ಕದ್ದಲ್ಲ.

**36. ತೊಂದರೆಗಳನ್ನು ನಿವಾರಿಸುವ ಅಧಿಕಾರ.**– ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯಸರ್ಕಾರವು, ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅಗತ್ಯವೆಂದು ತನಗೆ ತೋರಬಹುದಾದಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಆದೇಶವನ್ನು ಹೊರಡಿಸಬಹುದು:

ಆದರೆ, ಈ ಅಧಿನಿಯಮವು ಪ್ರಾರಂಭವಾದಂದಿನಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ನಂತರ ಅಂಥ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ.

**37. ರಾಜ್ಯ ವಿಧಾನ ಮಂಡಲದ ಮುಂದೆ ನಿಯಮಗಳು ಮತ್ತು ಆದೇಶಗಳನ್ನು ಮಂಡಿಸುವುದು.**– 34ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಮತ್ತು 36ನೇ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ಅಥವಾ ಹೊರಡಿಸಿದ ನಂತರ, ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು

ಸದನದ ಮುಂದೆ, ಅದು ಒಟ್ಟು ಮೂವತ್ತು ದಿನಗಳ ಅವಧಿಯ ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಒಂದಾದಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕೂ ಹೆಚ್ಚು ಅಧಿವೇಶನಗಳಲ್ಲಿ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಲಾದ ಅಧಿವೇಶನದ ನಿಕಟ ತರುವಾಯದ ಅಧಿವೇಶನವು ಅಥವಾ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ನಿಯಮದಲ್ಲಿ ಅಥವಾ ಆದೇಶದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ನಿಯಮವನ್ನು ಅಥವಾ ಆದೇಶವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ರಾಜ್ಯಪತ್ರದಲ್ಲಿ ಆ ಮಾರ್ಪಾಟನ್ನು ಅಥವಾ ರದ್ದಿಯಾತಿಯನ್ನು ರಾಜ್ಯಸರ್ಕಾರವು ಅಧಿಸೂಚಿಸಿದ ದಿನಾಂಕದಿಂದ, ಆ ನಿಯಮ ಅಥವಾ ಆದೇಶವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಜಾರಿಗೊಳಿಸತಕ್ಕದ್ದು ಅಥವಾ ಜಾರಿಗೊಳ್ಳತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಥವಾ ಆದೇಶದ ಮೇರೆಗೆ ಈ ಹಿಂದೆ ಮಾಡಲಾದ ಯಾವುದೇ ಕಾರ್ಯಕ್ಕೆ ಪ್ರತಿಕೂಲವಾಗಿರತಕ್ಕದ್ದಲ್ಲ.

**38. ನಿರಸನ.–** ಸಂಡೂರಿನ ರಾಜನು ಮಾಡಿದ ಉದ್ಘೋಷಣೆಯ ಮೂಲಕ ಜಾರಿಗೊಳಿಸಿದ ಸಂಡೂರು ಇನಾಮುಗಳ ವಿನಿಯಮನ, 1937ನ್ನು ಮತ್ತು ಸಂಡೂರು ಪ್ರದೇಶದಲ್ಲಿನ ಇನಾಮುಗಳ ಸಂಬಂಧದಲ್ಲಿ ಅಂಥ ರಾಜನು ಹೊರಡಿಸಿದ ಎಲ್ಲ ಆದೇಶಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

## ಅನುಸೂಚಿ–I

**[2 (1) (0) ನೇ ಪ್ರಕರಣವನ್ನು ನೋಡಿ]**

| | | | |
|---|---|---|---|
| 1. | ಸುಶೀಲ ನಗರ | 2. | ಎಮ್ಮಿಹಟ್ಟಿ |
| 3. | ಸಿದ್ಧಾಪುರ | 4. | ರಾಧಾ ನಗರ |
| 5. | ರಾಮಘಡ | 6. | ಜೈಸಿಂಗಪುರ |
| 7. | ದೌಲತ್‌ಪುರ | 8. | ಸಂಡೂರು |
| 9. | ಧರ್ಮಪುರ | 10. | ಯಶವಂತನಗರ |
| 11. | ಲಕ್ಷ್ಮೀಪುರ | 12. | ಹುಲಿಕುಂಟಿ |
| 13. | ಭುಜಂಗನಗರ | 14. | ನರಸಿಂಗಪುರ |
| 15. | ರಣಜಿತ್ ಪುರ | 16. | ವಿಠ್ಠಲನಗರ |
| 17. | ಕಾರ್ತಿಕೇಶ್ವರ | 18. | ದೇವಗಿರಿ |
| 19. | ನಾರಾಯಣಪುರ | 20. | ಕೃಷ್ಣನಗರ |
| 21. | ಶಂಕರಪುರ | 22. | ಮುರಾರಿಪುರ |
| 23. | ತಾರಾನಗರ | | |

## ಅನುಸೂಚಿ-II

**(22ನೇ ಪ್ರಕರಣವನ್ನು ನೋಡಿ)**

1. ಸಿದ್ಧಾಪುರ
2. ಸುಶೀಲ ನಗರ
3. ಹುಲಿಕುಂಟಿ
4. ಶಂಕರ ಪುರ
5. ಕಾರ್ತಿಕೇಶ್ವರ
6. ದೇವಗಿರಿ
7. ರಣಜಿತ್ ಪುರ
8. ಧರ್ಮಪುರ

**ಅಧಿಸೂಚನೆ**

**ಬೆಂಗಳೂರು, ದಿನಾಂಕ 8ನೇ ನವೆಂಬರ್ 1976 [ಸಂಖ್ಯೆ ಆರ್‌ಡಿ 84 ಐಎಂಎ 76]**

**ಎಸ್.ಒ.2762.–** ಕರ್ನಾಟಕ (ಸಂಡೂರು ಪ್ರದೇಶ) ಇನಾಮುಗಳ ರದ್ದಿಯಾತಿ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ ಸಂಖ್ಯೆ 54)ರ 1ನೇ ಪ್ರಕರಣದ (4)ನೇ ಉಪ-ಪ್ರಕರಣದಿಂದ ದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 8ನೇ ನವೆಂಬರ್ 1976ನ್ನು ಈ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂಬುದಾಗಿ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಎನ್.ವಿ. ದೊರೆಸ್ವಾಮಿ,**
ಅಧೀನ ಕಾರ್ಯದರ್ಶಿ.

The above translation of the Karnataka (Sandur Area) Inams Abolition Act, 1976 (54 of 1976) shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963).

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಪಿ.ಆರ್. 1195

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.